ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಕಲ್ಯಾಣ ಕಿರಣ

ನವೆಂಬರ್ 2016

ಶರಣರ ನಡೆ ಮುಕ್ತಿಯ ಕಡೆ



₹-20/- http://kalyanakirana.over-blog.com/ ಬ್ಲಾಗ್‌ನಲ್ಲಿ





ಮಹಾರಾಷ್ಟ್ರದಲ್ಲಿ
ನಡೆದ ಲಿಂಗಾಯತ
ಮಹಾಮೇಳದ

ಸುಮಧುರ
ಕ್ಷಣಗಳು



ಚನ್ನಬಸವೇಶ - ಮಂಟಪದ ಮಾಣಿಕ್ಯ

ಶ್ರೀ ಚನ್ನ ಬಸವೇಶ ಭಕ್ತರನು ಪೊರೆವೀಶ
ಜಯ ಭಜಕ ಜನ ಬಂಧು ಕಾರುಣ್ಯ ಸಿಂಧು ॥ ಪ ॥

ಪರಮ ಗುರು ಬಸವನ ಕರಕಮಲ ಜನಿತನೆ
ಶರಣ ಹೃತ್ಸರಸಿಯ ಶ್ರೀ ಪರಮಹಂಸೆಯೆ ॥ ಅ.ಪ ॥

ಕಾರ್ತಿಕ ಪ್ರತಿಪದೆಯ ದೀವಳಿಗೆಯಂದು
ಮಾತೆಯ ಗರ್ಭದಿಂ ನೀ ಬಂದೆಯಂದು ।
ಅವ್ವ ನಾಗಾಂಬಿಕೆಯ ಅಕ್ಕರೆಯ ಚಿಣ್ಣನೆ
ಅಯ್ಯ ಶಿವದೇವನ ಮಮತೆಯ ತನುಜನೆ ॥ 1 ॥

ಷಟಸ್ಥಲದ ಚೌಕಟ್ಟ ವಚನ ಶಾಸ್ತ್ರಕೆ ಇತ್ತೆ
ಸಟೆಯ ಮಾಯೆಯ ಗೆಲಿದು ವಿರಾಗಿ ಎನಿಸಿದೆ ।
ಉನ್ಮನಿಯ ಉಯ್ಯಾಲೆಯಲ್ಲಿ ತೂಗಿ ನಲಿದು
ಅನುಭವ ಮಂಟಪದ ಹೊಂಗಳಶವಾದೆ ॥ 2 ॥

ವಚನ ವಾಙ್ಮಯಕ್ಕಂದು ಸಂಕಷ್ಟ ಎರಗಿರಲು
ಕಾಷಾಯ ಧರಿಸಿಯೂ ಖಡ್ಗವನು ನೀ ಹಿಡಿದೆ ।
ಮುನ್ನಡೆಸಿ ಶರಣರ ವಾಙ್ಮಯವ ರಕ್ಷಿಸಿದೆ
ಚನ್ನ ಹುಣ್ಣಿಮೆಯಂದು ಉಳವಿಯಲಿ ಬಯಲಾದೆ ॥ 3 ॥

ನೀ ಪಾದವಿಟ್ಟುದು ಸುಕ್ಷೇತ್ರ ತಾನಾಯ್ತು
ನೀ ನುಡಿದ ಮಾತೆಲ್ಲ ದಿವ್ಯ ಶಾಸ್ತ್ರವದಾಯ್ತು
ಶರಣ ಧರ್ಮದ ಉಳಿವು ನಿನ್ನಿಂದಲೇ ಆಯ್ತು
ಸಚ್ಚಿದಾನಂದನ ಮೆಚ್ಚುಗೆಯ ಮಗನಾದೆ ॥ 4 ॥

– ಮಾತಾಜಿ

ಮರ್ತ್ಯಲೋಕದ ಭಕ್ತರ ಮನವ ಬೆಳಗಲೆಂದು ಇಳಿತಂದನಯ್ಯಾ ಶಿವನು;
ಕತ್ತಲೆಯ ಪಾಳೆಯವ ರವಿ ಹೊಕ್ಕಂತಾಯಿತ್ತಯ್ಯಾ
ಚಿತ್ತದ ಪ್ರಕೃತಿಯ ಹಿಂಗಿಸಿ,
ಮುಕ್ತಿ ಪಥವ ತೋರಿದನೆಲ್ಲ ಅಸಂಖ್ಯಾತ ಗಣಂಗಳಿಗೆ
ತನುವೆಲ್ಲ ಸ್ವಯಲಿಂಗ, ಮನವೆಲ್ಲ ಚರಲಿಂಗ
ಭಾವವೆಲ್ಲ ಮಹಾಘನದ ಬೆಳಗು
ಚನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಸಮ್ಯಕ್ ಜ್ಞಾನಿ ಚನ್ನಬಸವಣ್ಣನ ಶ್ರೀ ಪಾದಕ್ಕ ಶರಣೆಂದು,
ಎನ್ನ ಭವಂ ನಾಸ್ತಿಯಾಯಿತ್ತಯ್ಯಾ ಪ್ರಭುವೆ.

- ಜಗನ್ಮಾತಾ ಅಕ್ಕಮಹಾದೇವಿ

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

866666

ಸಂಪುಟ-47 ಬಸವ ಶಕೆ -882 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-11 ನವೆಂಬರ್-2016 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಶರಣ ವ್ರತ ಸ್ವೀಕಾರ

ಶರಣ ಬಂಧುಗಳೇ,

ಶರಣ ವ್ರತ ಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು. 40 ದಿವಸಗಳ ಗುರುಸಾರಾಯ ಸಂಪದ್ ವ್ರತ, 30 ದಿನಗಳ ಲಿಂಗ ಸಾರಾಯ ಸಂಪದ್ ವ್ರತ, 20 ದಿವಸಗಳ ಜಂಗಮ ಸಾರಾಯ ಸಂಪದ್ ವ್ರತ, 10 ದಿವಸಗಳ ಪ್ರಸಾದ ಸಾರಾಯ ಸಂಪದ್ ವ್ರತ. ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ. 14-01-2017ರಂದು ವ್ರತವನ್ನು ಪೂರ್ಣ ಗೊಳಿಸಬೇಕು.

1. ಗುರು ಸಾರಾಯ ಸಂಪದ್ ವ್ರತ - ಡಿಸೆಂಬರ್ 2ರಂದು
2. ಲಿಂಗ ಸಾರಾಯ ಸಂಪದ್ ವ್ರತ - ಡಿಸೆಂಬರ್ 12ರಂದು
3. ಜಂಗಮ ಸಾರಾಯ ಸಂಪದ್ ವ್ರತ - ಡಿಸೆಂಬರ್ 22ರಂದು
4. ಪ್ರಸಾದ ಸಾರಾಯ ಸಂಪದ್ ವ್ರತ - ಜನವರಿ 1ರಂದು

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476,

Send SMS to 9945806297

Email :- kalyanakirana1970@gmail.com

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ

ಮೂವತ್ತನೆಯ ಶರಣ ಮೇಳ

2017ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ)ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಮೂವತ್ತನೆಯ ಶರಣ ಮೇಳವು 2017ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚು ಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 10,000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು :3000 ರೂ.
2. ಪೋಷಕರು : 8000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 1500 ರೂ.
3. ದಾನಿಗಳು: 5000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 500 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 10,000/ 20,000 ರೂಪಾಯಿಗಳ ಪುದುವಟ್ಟು (*F.D*)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ *State Bank of India, Koodala Sangama* ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧ ಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೂಡಲ ಸಂಗಮ, ಬ್ಯಾಂಕ್ ಖಾತೆಗಳು

Sharana Mela Utsava Samithi, SB A/c 10818354899
Basava Dharma Peetha, SB A/c No. 10818354684
Basava Mahamane Charitable Trust SB A/c 32391821105

Sharana Mela Utsava Samithi, (Canara Bank, Bangalore) SB A/c 1145101024057 ಕಾಣಿಕೆ ಕಳಿಸುವವರು ನೇರವಾಗಿ ವರ್ಗಾಯಿಸಿದರೆ ಕಾರ್ಯಾಲಯಕ್ಕೆ ತಿಳಿಸಬೇಕು. 80ಜಿ ಇನ್‌ಕಮ್‌ಟ್ಯಾಕ್ಸ್ ರಿಯಾಯಿತಿ ಬೇಕೆನ್ನುವವರು ಕಾರ್ಯಾಲಯಕ್ಕೆ ಸಂಪರ್ಕಿಸಿ.

ಸಂಪರ್ಕಿಸುವ ವಿಳಾಸಗಳು

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 9448046554/9880768555

ಅಕ್ಕನ ಅಮರವಾಣಿ

– ಮಾತಾಜಿ

ಭಾಗ– 35

358. ಗುರು ಬಸವಣ್ಣನವರ ಪಾದಕ್ಕೆ ನಮೋನಮಃ

ಶಿವಾ ಶಿವಾ ಆದಿ ಅನಾದಿಗಳೆಂಬರೆಡಿಲ್ಲದ ನಿರವಯ ಶಿವ,
ನಿಮ್ಮ ನಿಜವನಾರಯ್ಯ ಬಲ್ಲವರು?
ವೇದಗಳಿಂಗಭೇದ್ಯನು, ಶಾಸ್ತ್ರಂಗಳಿಂಗಸಾಧ್ಯನು, ಪುರಾಣಕ್ಕಮ್ಯನು
ಆಗಮಕ್ಕೆ ಅಗೋಚರನು, ತರ್ಕಕ್ಕೆ ಅತರ್ಕ್ಯನು
ವಾಙ್ಮನಾತೀತವಾಗಿಪ್ಪ ಪರಶಿವ ಲಿಂಗವನು
ಕೆಲಂಬರು ಸಕಲನೆಂಬರು, ಕೆಲಂಬರು ನಿಃಕಲನೆಂಬರು
ಕೆಲಂಬರು ಸೂಕ್ಷ್ಮನೆಂಬರು, ಕೆಲಂಬರು ಸ್ಥೂಲನೆಂಬರು,
ಈ ಬಗೆಯ ಭಾವದಿಂದ ಹರಿ ಬ್ರಹ್ಮ ಇಂದ್ರ ಚಂದ್ರ ರವಿ
ಕಾಲ ಕಾಮ ದಕ್ಷ ದೇವ ದಾನವ ಮಾನವರೆಲ್ಲರೂ
ಕಾಣಲರಿಯದೆ ಭವಭಾರಿಗಳಾದರು
ಈ ಪರಿಯಲ್ಲಿ ಭವಭಾರಿಗಳಾಗಿ ಬಯಲಾಗಿ ಹೋಗಬಾರದೆಂದು
ನಮ್ಮ ಬಸವಣ್ಣನು ಜಗದ್ಧಿತಾರ್ಥಕ್ಕಾಗಿ ಮರ್ತ್ಯಕ್ಕೆ ಅವತರಿಸಿ
ಶರಣ ಮಾರ್ಗವನರುಪುವುದಕ್ಕೆ ಬಾವನ್ನ ವಿವರವನ್ನೊಳಕೊಂಡು
ಚರಿಸಿದನದೆಂತೆಂದೊಡೆ–
ಗುರು ಕಾರುಣ್ಯವೇದ್ಯನು, ವಿಭೂತಿ ರುದ್ರಾಕ್ಷಿ ಧಾರಕನು,
ಪಂಚಾಕ್ಷರಿ ಭಾಷಾ ಸಮೇತನು, ಲಿಂಗಾಂಗ ಸಂಬಂಧಿ,
ನಿತ್ಯ ಲಿಂಗಾರ್ಚಕನು, ಅರ್ಪಿತದಲ್ಲಿ ಅವಧಾನಿ,
ಪಾದೋದಕ ಪ್ರಸಾದ ಗ್ರಾಹಕನು, ಗುರು ಭಕ್ತಿ ಸಂಪನ್ನನು,
ಏಕಲಿಂಗ ನಿಷ್ಠಾಪರನು, ಚರಲಿಂಗ ಲೋಲುಪ್ತನು,
ಶರಣ ಸಂಗಮೈಶ್ವರ್ಯನು, ತ್ರಿವಿಧಕ್ಕಾಯತನು
ತ್ರಿಕರಣ ಶುದ್ಧನು, ತ್ರಿವಿಧ ಲಿಂಗಾಂಗ ಸಂಬಂಧಿ,
ಅನ್ಯದೈವ ಸ್ಮರಣೆಯ ಹೊದ್ದ, ಭವಿ ಸಂಗವ ಮಾಡ,
ಭವಿಪಾಕವ ಕೊಳ್ಳ, ಪರಸ್ತ್ರೀಯ ಬೆರಸ, ಪರಧನವನೊಲ್ಲ,
ಸ್ತುತಿ ನಿಂದೆಗಳ ಹೊದ್ದ, ಆತ್ಮಸ್ತುತಿಯ ಮಾಡ, ಪರನಿಂದೆಯನಾಡ,
ಅನೃತವನ್ನುಡಿಯ, ಹಿಂಸೆಯ ಮಾಡ,
ತಾಮಸ ಭಕ್ತಿಯ ಸಂಗವ ಮಾಡ, ಸದಾಚಾರ ಸಂಪನ್ನ,
ಗುರು–ಲಿಂಗ–ಜಂಗಮಕ್ಕೆ ಅರ್ಥಪ್ರಾಣಾಭಿಮಾನ ಮುಂತಾದ
ತ್ರಿವಿಧವನರ್ಪಿಸುವ, ಪಾದೋದಕ–ಪ್ರಸಾದ ಮುಂತಾಗಿ ಭೋಗಿಸುವ,

ಜಂಗಮ ನಂದೆಯ ಸೈರಿಸ, ಪ್ರಸಾದ ನಂದೆಯ ಕೇಳ,
ಅನ್ಯರ ಹಾಸ್ಯಗೈಯ, ಪಾತ್ರಾಪಾತ್ರಾವನರಿದೀವ,
ಚರ್ತುವಿಧ ಪದವಿಯ ಹಾರ, ಅರಿಷಡ್ವರ್ಗಕ್ಕೆ ಅಳುಕ,
ಕುಲಾದಿ ಮದಂಗಳ ಬಗೆಗೊಳ್ಳ, ಕುತ್ಸಿತ ಕುಹಕಕ್ಕೆ ಸೇರ,
ದ್ವೈತಾದ್ವೈತವ ನುಡಿವವನಲ್ಲ, ಸಂಕಲ್ಪ-ವಿಕಲ್ಪವ ಮಾಡುವವನಲ್ಲ,
ಕಾಲೋಚಿತವ ಬಲ್ಲ, ಕ್ರಮಯುಕ್ತನಾಗಿ ಷಟಸ್ಥಲ ಸಂಬಂಧಿ,
ಸರ್ವಾಂಗಲಿಂಗಿ, ದಾಸೋಹ ಸಂಪನ್ನ, ದಯಾಭರಿತ,
ನ್ಯಾಯನಿಷ್ಠುರ, ನುಡಿದಂತೆ ನಡೆವ,
ಮಾಟಕೂಟಗಳಂಗಳ ಅನುಸಂಧಾನಿ, ಮರೆವಿಲ್ಲದ ಮಹಾಜ್ಞಾನಿ,
ಶಿವಶರಣರನುಭಾವಿ, ಕರ್ಮದ ಬಟ್ಟೆಯ ಮೆಟ್ಟ,
ಕಲುಷ ಕಾರ್ಪಣ್ಯವ ಮುಟ್ಟ, ಕಾಯಕ್ಕಲ್ಲದೆ ಸಲ್ಲ,
ದಾಸೋಹ ಭಾವ ಸಂಪನ್ನ, ಕಾಯದ ಕಳವಳಕ್ಕಂಜ,
ಶಿವಧರ್ಮದ ಪುಂಜ,
ಇಂತಿ ಐವತ್ತೆರಡು ವಿಧದಲ್ಲಿ ಮೊಪುಣನಾಗಿ ಮೆರೆವ ನಮ್ಮ ಬಸವಣ್ಣನು.
ಆ ಬಸವಣ್ಣನ ಶ್ರೀಪಾದಕ್ಕೆ ನಾನು ಅಹೋರಾತ್ರಿಯಲ್ಲಿ ನಮೋನಮಃ
ಎಂದು ಬದುಕಿದೆನು ಕಾಣಾ ಚನ್ನಮಲ್ಲಿಕಾರ್ಜುನದೇವರ ದೇವಾ

ಭಾವಾರ್ಥ-ಜಗನ್ಮಾತಾ ಅಕ್ಕ ಮಹಾದೇವಿಯವರು ಈ ವಚನದಲ್ಲಿ ಗುರು ಬಸವಣ್ಣನವರು ಈ ಇಳೆಯಲ್ಲಿ ಅವತರಿಸಿದ ಉದ್ದೇಶವನ್ನು ತಿಳಿಸುವುದರೊಂದಿಗೆ, ಧರ್ಮಪಿತರ ಐವತ್ತೆರಡು ಗುಣಲಕ್ಷಣ-ಸಾಧನೆಗಳನ್ನು ಸ್ಮರಿಸುತ್ತಾ ಧನ್ಯತೆಯನ್ನು ಅನುಭವಿಸುತ್ತಿದ್ದಾರೆ. ತನ್ಮೂಲಕ ನಮಗೂ ಗುರು ಬಸವಣ್ಣನವರ ದಿವ್ಯ-ಭವ್ಯ-ಪರಿಪೂರ್ಣ ವ್ಯಕ್ತಿತ್ವವನ್ನು ಪರಿಚಯಿಸುತ್ತಿದ್ದಾರೆ, ಅನಾವರಣಗೊಳಿಸುತ್ತಿದ್ದಾರೆ. ಆದಿ-ಅನಾದಿ ಎಂಬ ದ್ವಂದ್ವರಹಿತನಾದ, ನಿರಾಕಾರ, ನಿರ್ಗುಣನಾದ ದೇವರ ನಿಜವಾದ ಅಸ್ತಿತ್ವ-ಸ್ವರೂಪವು ಯಾರಿಗೆ ತಿಳಿದಿತ್ತು? ವೇದಗಳು ದೇವನ ಅಗೋಚರ ಸ್ವರೂಪವನ್ನು ಮಾತ್ರ ಹೇಳಿ ಅಲ್ಲಿಗೆ ನಂತವು. ಶಾಸ್ತ್ರಗಳು ಸಹ ಅವನನ್ನು ತೋರಿಸಲಾರದೆ ಸೋತವು. ಪುರಾಣಗಳಿಗೂ ನಿಲುಕಲಾರದೆ ಅಗಮ್ಯನಾಗಿಯೆ ಉಳಿದನು. ಆಗಮಗಳು ದೇವನನ್ನು ಕಾಣದೆ ಹಿಮ್ಮೆಟ್ಟಿದವು. ತರ್ಕಶಾಸ್ತ್ರದ ತರ್ಕಕ್ಕೂ ಸಿಗದೆ ದೂರ ಉಳಿದನು. ಹೀಗೆ ಮಾತು-ಮನಸ್ಸುಗಳಿಗೆ ಅತೀತನಾದ ಪರಮಾತ್ಮನನ್ನು ಕೆಲವರು ಸಕಲ ಎಂದು ಕರೆದರು. ಮತ್ತೆ ಕೆಲವರು ನಿಃಕಲ ಎಂದರು. ಅದೇ ರೀತಿ ಕೆಲವರು ಸೂಕ್ಷ್ಮ ಎಂದೂ ಮತ್ತೂ ಕೆಲವರು ಸ್ಥೂಲ ಎಂದೂ ಕರೆದು ತಮ್ಮ ಮತಿಮನಗಳಿಗೆ ತೋಚಿದಂತೆ ದೇವರ ಸ್ವರೂಪವನ್ನು ವ್ಯಾಖ್ಯಾನಿಸುತ್ತಾ ಹೋದರು. ಈ ರೀತಿ ಹರಿ ಬ್ರಹ್ಮ ಇಂದ್ರ ಚಂದ್ರ ರವಿ ಕಾಲ ಕಾಮ ದಕ್ಷ ದೇವ ದಾನವ ಮಾನವ ಮುಂತಾದವರೆಲ್ಲರೂ ಪರಮಾತ್ಮನ ನಿಜಜ್ಞಾನ, ಅಸ್ತಿತ್ವ, ಸ್ವರೂಪವನ್ನು ಅರಿಯದ ಅಜ್ಞಾನಿಗಳಾಗಿ, ಜಗತ್ತಿನಿಂದ ನಿರ್ಗಮಿಸಿದರು. ಮುಂದೆ ಈ ಪರಿಯಲ್ಲಿ ಭವಭಾರಿಗಳಾಗಿ, ಬಯಲಾಗಿ ಹೋಗಬಾರದು ಎಂಬ ಸಂಕಲ್ಪದಿಂದ ಜಗತ್ತನ್ನು ಉದ್ಧರಿಸಲಿಕ್ಕೆ ದೇವನ

ಕರುಣೆಯ ಕಂದ ಗುರು ಬಸವಣ್ಣನವರು ಶರಣ ಮಾರ್ಗ(ಧರ್ಮ)ವನ್ನು ತಿಳಿಸಿ, ದೇವನ ಹೆಸರಿನ ಧರ್ಮ ಸ್ಥಾಪನೆಗಾಗಿ ಈ ಭೂಮಿಯಲ್ಲಿ ಅವತರಿಸಿದರು. ಅಂತೆಯೇ ಬಸವಗುರುವಿನ ಗುಣಲಕ್ಷಣಗಳು ಇಂತಿದ್ದವು.

ಪರಮಾತ್ಮನು ತಾನೆ ಗುರುವಾಗಿ ಕಾರುಣ್ಯರಸವನ್ನು ತನ್ನ ಅತ್ಯಂತ ಪ್ರೀತಿಪಾತ್ರ, ಮುದ್ದಿನ ಮಗನಾದ ಗುರು ಬಸವತಂದೆಯವರ ಮೇಲೆ ಹರಿಸಿದನು. ಅಷ್ಟಾವರಣಗಳಾದ ವಿಭೂತಿ, ರುದ್ರಾಕ್ಷಿಯನ್ನು ಸದಾ ಮೈಮೇಲೆ ಧರಿಸುತ್ತಿದ್ದರು. ಮಾತಿನಲ್ಲಿ, ನಾಲಿಗೆಯಲ್ಲಿ ಪಂಚಾಕ್ಷರಿ ಮಂತ್ರ ಉಲಿಯುತ್ತಿತ್ತು. ಅಂಗದ ಮೇಲೆ ಇಷ್ಟಲಿಂಗ ರಾರಾಜಿಸುತ್ತಿತ್ತು. ನಿತ್ಯವೂ ಇಷ್ಟಲಿಂಗಾರ್ಚನೆ ತಪ್ಪದೆ ಮಾಡುತ್ತಿದ್ದರು. ಇಷ್ಟ-ಮನ-ಭಾವಗಳಿಗೆ ಕ್ರಮವಾಗಿ ಪ್ರಸಾದ-ರುಚಿ-ತೃಪ್ತಿಗಳನ್ನು ಎಚ್ಚರಿಕೆಯಿಂದ ಸಮರ್ಪಿಸುತ್ತಿದ್ದರು. ಪಾದೋದಕ, ಪ್ರಸಾದವನ್ನು ಮಾತ್ರ ಸ್ವೀಕರಿಸುತ್ತಿದ್ದರು. ಗುರುಭಕ್ತಿಯು ಅವರಲ್ಲಿ ಸ್ವಭಾವ ಜನ್ಯವಾಗಿದ್ದಿತು. ಜಗದೊಡೆಯನಾದ ಪರಮಾತ್ಮನನ್ನು ಏಕನಿಷ್ಠೆಯಿಂದ ಆರಾಧಿಸುತ್ತಿದ್ದರು. ಚರಲಿಂಗ (ನಡೆಲಿಂಗಗಳೆನಿಸಿದ ಧರ್ಮಪ್ರಚಾರಕ ಜ್ಞಾನಿಗಳು) ಅವರನ್ನು ಕಂಡು ಆನಂದಿಸುತ್ತಿದ್ದರು. ಪರಮಾತ್ಮನಿಗೆ ಸಂಪೂರ್ಣ ಶರಣಾಗತರಾದವರು ಅವರ ಪಾಲಿಗೆ ಸಕಲಸಂಪತ್ತು ಆಗಿದ್ದರು. ತ್ರಿವಿಧ(ಗುರು,ಲಿಂಗ,ಜಂಗಮ) ತತ್ವವನ್ನು ತಮ್ಮಲ್ಲಿ ಆಯತ ಮಾಡಿಕೊಂಡಿದ್ದರು. ಬಸವಣ್ಣನವರ ಕಾಯ-ಮಾತು-ಮನಸ್ಸು ಶುದ್ಧಿಯಾಗಿದ್ದವು. ಶರೀರಕ್ಕೆ ಇಷ್ಟಲಿಂಗ, ಮನಸ್ಸಿಗೆ ಪ್ರಾಣಲಿಂಗ, ಆತ್ಮಕ್ಕೆ ಭಾವಲಿಂಗಗಳನ್ನು ಕ್ರಮವಾಗಿ ಸಂಬಂಧಿಸಿ ಅಳವಟ್ಟಿದ್ದವು. ಜಗತ್ತಿಗೆ ಕಾರಣೀಭೂತನಾಗಿ, ತನಗೊಂದು ಕಾರಣವಿಲ್ಲದ, ನಿರಾಕಾರನೂ, ಸರ್ವಶಕ್ತನೂ ಆದ ಲಿಂಗದೇವನನ್ನು ಬಿಟ್ಟು ಅನ್ಯ ದೇವತೆಗಳ ಸ್ಮರಣೆಯನ್ನು ಎಂದಿಗೂ ಮಾಡುತ್ತಿರಲಿಲ್ಲ. ಪರಮಾತ್ಮನನ್ನು ನಂಬದ ಭವಿಯಿಂದ ದೂರವಿರುತಿದ್ದರು. ಪರಮಾತ್ಮನ ನೆನಪಲ್ಲಿ ತಯಾರಿಸದ ಅಡುಗೆ(ಭವಿಪಾಕ)ಯನ್ನು ಮುಟ್ಟುತ್ತಿರಲಿಲ್ಲ. ಪರಸ್ತ್ರೀಯರನ್ನು ಮಹಾದೇವಿ ಎಂದು ಗೌರವಿಸುತಿದ್ದರು. ಬೇರೆಯವರಿಗೆ ಸೇರಿದ ಧನವನ್ನು ಸ್ವೀಕರಿಸುತ್ತಿರಲಿಲ್ಲ. ಹೊಗಳಿಕೆಗೆ ಹಿಗ್ಗದ- ತೆಗಳಿಕೆಗೆ ಕುಗ್ಗದ ಸಮಚಿತ್ತತೆ ಅವರದಾಗಿತ್ತು. ತಮ್ಮನ್ನು ತಾವು ಎಂದಿಗೂ ವೈಭವೀಕರಿಸಿ ಮಾತಾಡಿದ್ದನ್ನು ಗುರು ಬಸವತಂದೆಯವರ ಸಮಕಾಲೀನರಾದ ಅಕ್ಕನವರು ಎಂದೂ ಕಂಡಿರಲಿಲ್ಲ. ಇನ್ನು ಮತ್ತೊಬ್ಬರನ್ನು ನಿಂದಿಸುವುದಂತೂ ದೂರವೇ ಉಳಿಯಿತು. ಅಹಿತವಾದುದನ್ನು ನುಡಿಯರು. ಮೈಮಾತುಮನಗಳಿಂದ ಯಾರಿಗೂ ಹಿಂಸೆ ಮಾಡದ ಅಹಿಂಸಾವ್ರತಧಾರಿಗಳು. ತಾಮಸ ಭಕ್ತಿ-ಅನಾಚಾರ, ಮೂಢನಂಬಿಕೆ, ಕಂದಾಚಾರದಿಂದ ಕೂಡಿದ ಆಚಾರ-ವಿಚಾರಗಳು ಅವರ ಹತ್ತಿರ ಸುಳಿಯುತ್ತಿರಲಿಲ್ಲ. ಸದಾಚಾರವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅನ್ಯರಿಗೆ ಮಾದರಿಯಾಗಿದ್ದರು. ಗುರುವಿಗೆ ಅರ್ಥ- ಅಂದರೆ ಧರ್ಮ ಮತ್ತು ಸಮಾಜೋದ್ಧಾರದ ಸತ್ಕಾರ್ಯಗಳಿಗೆ ಹಣವನ್ನು ಸಮರ್ಪಿಸುವುದು; ಲಿಂಗದೇವನನ್ನು ತಮ್ಮ ಪ್ರಾಣವನ್ನಾಗಿ ಮಾಡಿಕೊಂಡು ಆರಾಧಿಸುವುದು. ಜಂಗಮಕ್ಕೆ ಅಂದರೆ ತಮ್ಮನ್ನು ತಾವು ಸಂಪೂರ್ಣವಾಗಿ ಧರ್ಮಪ್ರಚಾರಕ್ಕೆ ಸಮರ್ಪಿಸಿಕೊಂಡ ನಿಸ್ವಾರ್ಥ ತ್ಯಾಗಿಗಳು- ಇಂಥ ಮಹಾನುಭಾವರ ಬಗ್ಗೆ ಬಸವಣ್ಣನವರಿಗೆ ಅಭಿಮಾನವೆನಿಸುತ್ತಿತ್ತು. ನಿತ್ಯಪೂಜೆಯ ನಂತರ ಲಭಿಸುವ ಪೂಜೆಯ ಪ್ರತಿಫಲವಾದ ಪಾದೋದಕ ಮತ್ತು

ಲಿಂಗಪ್ರಸಾದವನ್ನು ತಪ್ಪದೆ ಸ್ವೀಕರಿಸಿಯೇ ಮುಂದಿನ ಚಟುವಟಿಕೆಗಳು ಆರಂಭವಾಗುತ್ತಿತ್ತು. ಸಾಮಾಜಿಕವಾಗಿ ಶುದ್ಧಿ ಮತ್ತು ನೈತಿಕ ಮೌಲ್ಯಗಳನ್ನು ಬಿತ್ತಲು ಅವಿಶ್ರಾಂತರಾಗಿ ದುಡಿಯುವ ಧರ್ಮಪ್ರಚಾರಕರನ್ನು, ತ್ಯಾಗಿಗಳನ್ನು ಅನ್ಯರು ನಿಂದಿಸಿದರೆ ಅವರು ಸಹಿಸುತ್ತಿರಲಿಲ್ಲ; ಪ್ರತಿಭಟಿಸುತ್ತಿದ್ದರು. ಗುರುಲಿಂಗಜಂಗಮರಿಂದ ಪಡೆಯುವ ಪವಿತ್ರ ಪ್ರಸಾದದ ಬಗ್ಗೆ ನಿಂದನೆಯ ಮಾತಾಡಿದರೆ ಕೇಳುತ್ತಿರಲಿಲ್ಲ. ಯಾರನ್ನು ಅಪಹಾಸ್ಯ ಮಾಡುವ ಪ್ರವೃತ್ತಿ ಅವರದಾಗಿರಲಿಲ್ಲ. ದಾನ-ದಾಸೋಹ ಮಾಡುವಾಗ ಅಪಾತ್ರರು- ಸತ್ಪಾತ್ರರು ಎಂಬುದನ್ನು ಪರಿಶೀಲಿಸಿದ ನಂತರವಷ್ಟೇ ಯೋಗ್ಯರಿಗೆ ದಾನವೂ ಸಿಗುತ್ತಿತ್ತು. ಚತುರ್ವಿಧ ಸಂಪತ್ತು ಆದ ಭಕ್ತ, ಜಂಗಮ, ಪಾದೋದಕ, ಪ್ರಸಾದಗಳನ್ನು ಅಪೇಕ್ಷಿಸುತ್ತಿದ್ದರು. ಅರಿಷ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಗೆ ಎಂದೂ ಅಳುಕಿದವರಲ್ಲ. ಕುಲಮದ ಎಂಬುದು ಅವರ ಹತ್ತಿರ ಸುಳಿಯಲಿಲ್ಲ. ಕುಟಿಲ-ಕುಹಕಗಳು ಅವರಿಂದ ಬಲು ದೂರ. ದ್ವೈತ ಸಿದ್ಧಾಂತದಲ್ಲಿ ಹೇಳುವಂತೆ ಜೀವಾತ್ಮ ಮತ್ತು ಪರಮಾತ್ಮ ಬೇರೆ ಎಂದಾಗಲಿ ಅಥವ ಅದ್ವೈತದಲ್ಲಿ ಪ್ರತಿಪಾದಿಸುವಂತೆ ಜೀವಾತ್ಮ-ಪರಮಾತ್ಮರು ಒಂದೆ ಎಂದು ದ್ವಂದ್ವ ತತ್ವಗಳನ್ನು ಹೇಳುತ್ತಾ ಗೊಂದಲ ಮೂಡಿಸುವವರಲ್ಲ.

ಸಂಕಲ್ಪ(ಮಾಡಬೇಕು) ಅಥವ ವಿಕಲ್ಪ (ಮಾಡಬಾರದು) ಎಂಬ ದ್ವಂದ್ವಗಳಿಗೆ ಒಳಗಾಗದೆ ಸರಿಯಾದ ಸಮಯದಲ್ಲಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರು. ಕಾಲಕ್ಕೆ ತಕ್ಕಂತೆ ನಡೆದುಕೊಳ್ಳುತ್ತಿದ್ದರು. ಕ್ರಮಬದ್ಧವಾಗಿ ಷಟಸ್ಥಲಗಳಾದ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಸ್ಥಲಗಳನ್ನು ಸಂಬಂಧಿಸಿಕೊಂಡಿದ್ದರು. ತಮ್ಮ ಸರ್ವಾಂಗದಲ್ಲೂ ಪರಮಾತ್ಮನನ್ನು ತುಂಬಿಕೊಂಡಿದ್ದರು. ತನುಮನಧನವನ್ನು ಗುರುಲಿಂಗಜಂಗಮಕ್ಕೆ ಅರ್ಪಿಸುವುದರಲ್ಲಿ ಸದಾ ಮುಂದಿರುತ್ತಿದ್ದರು. ಸಕಲ ಜೀವಾತ್ಮರಿಗೂ ಲೇಸು ಬಯಸುವ ದಯೆ ಉಳ್ಳವರಾಗಿದ್ದರು. ನೊಂದು ಬೆಂದವರಿಗೆ ನ್ಯಾಯದಾನ ಮಾಡುವುದರಲ್ಲಿ ಸತ್ಯನಿಷ್ಟುರರಾಗಿದ್ದರು. ನುಡಿದಂತೆ ಜೀವನದಲ್ಲಿ ನಡೆಯುತ್ತಿದ್ದರು. ಮಾಟ- ಗುರುಲಿಂಗಜಂಗಮಕ್ಕೆ ಮಾಡುವ ಮತ್ತು ಕೂಟ- ಅವರನ್ನು ಕೂಡು(ಸತ್ಸಂಗ)ವುದಕ್ಕೆ ಅನುವು ಮಾಡಿಕೊಳ್ಳುತ್ತಿದ್ದರು. ಪರಮಾತ್ಮನನ್ನು ಮರೆಯದ ಮಹಾಜ್ಞಾನಿಗಳಾಗಿದ್ದರು. ಶಿವಶರಣರೊಂದಿಗೆ ಸಾಧನೆಯ ಅನುಭವವನ್ನು ವಿನಿಮಯ ಮಾಡುತ್ತಿದ್ದರು. ಕರ್ಮದ ದಾರಿಯಲ್ಲಿ ಹೋದವರಲ್ಲ. ತನುಮನಗಳನ್ನು ಶುಚಿಯಾಗಿರಿಸಿಕೊಳ್ಳುತ್ತಿದ್ದ ಅವರಿಗೆ ಕೊಳಕು ಎಂದಿಗೂ ಸೇರುತ್ತಿರಲಿಲ್ಲ. ಸತ್ಯಶುದ್ಧ ಕಾಯಕ ಮಾಡುತ್ತಿದ್ದರು. ಮನದಲ್ಲಿ ಸದಾ ದಾಸ ನಾನು ಎಂಬ ವಿನೀತ ಭಾವದಲ್ಲಿರುತ್ತಿದ್ದರು. ಶರೀರದ ಕೋಟಲೆಗಳಾದ ಹಸಿವು, ತೃಷೆ ಮುಂತಾದವುಗಳಿಗೆ ಎಂದೂ ಕಳವಳ ಪಟ್ಟವರಲ್ಲ. ಈ ಎಲ್ಲಾ ವಿಧದ ಸಾಮರ್ಥ್ಯಗಳನ್ನು ಹೊಂದಿದ್ದ ಗುರು ಬಸವಣ್ಣನವರಿಗೆ ಮಾತ್ರ ದೇವಧರ್ಮವನ್ನು ಸ್ಥಾಪಿಸಲು ಸಾಧ್ಯವಾಯಿತು ಎಂದು ಅಕ್ಕಮಹಾದೇವಿಯವರು ಧರ್ಮಪಿತರನ್ನು ಕೊಂಡಾಡುತ್ತಿದ್ದಾರೆ.

359 ಘನಸುಖದ ಹಂಬಲ

ತನುವನೆಲ್ಲವ ಜರಿದು ಮನವ ನಿಮ್ಮೊಳಗಿರಿಸಿ,

ಘನಸುಖದಲೋಲಾಡುವ ಪರಿಯ ತೋರಯ್ಯ ಎನಗೆ
ಭಾವವಿಲ್ಲದ ಬಯಲ ಸುಖವು ಭಾವಿಸದಡೆಂತಹುದು
ಬಹುಮುಖರುಗಳಿಗೆ? ಕೇಳಯ್ಯಾ
ಚನ್ನಮಲ್ಲಿಕಾರ್ಜುನ ದೇವರ ದೇವಾ
ನಾನಳಿದು ನೀನುಳಿದ ಪರಿಯ ತೋರಯ್ಯ ಪ್ರಭುವೆ.

ಭಾವಾರ್ಥ- ನಾನು ಶರೀರ ಎಂಬ ಮೋಹಭಾವವನ್ನು ಜರಿದು, ನನ್ನ ಮನಸ್ಸನ್ನು ಓ! ದೇವಾ, ನಿನ್ನಲ್ಲಿರಿಸಿ ಪರಮಸುಖದಲ್ಲಿರುವ ಪರಿಯನ್ನು ನನಗೆ ತೋರಿಸು. ನಿರ್ಭಾವದ ಬಯಲ ಸುಖದ ಅನುಭವವನ್ನು ಚಂಚಲ ಮನದವರಿಗೆ ಭಾವಿಸಲು ಸಾಧ್ಯವೆ? ಚನ್ನಮಲ್ಲಿಕಾರ್ಜುನ ದೇವರ ದೇವನೇ ನನ್ನ ಮೊರೆಯನ್ನು ಕೇಳು. ನಾನು ಎಂಬುದು ಅಳಿದು- ಇಲ್ಲವಾಗಿ ನೀನು ಮಾತ್ರ ಉಳಿಯುವಂಥ ಪರಮಸ್ಥಿತಿಯನ್ನು ನನಗೆ ತೋರಿಸು.

360. ಎನ್ನಂಗದ ಅವಸಾನವ ಹೇಳಾ

ಕರ್ಮವೆಂಬ ಕದಳಿ ಎನಗೆ, ಕಾಯವೆಂಬ ಕದಳಿ ನಿಮಗೆ
ಮಾಟವೆಂಬ ಕದಳಿ ಬಸವಣ್ಣಂಗೆ
ಭಾವವೆಂಬ ಕದಳಿ ಚನ್ನಬಸವಣ್ಣಂಗೆ
ಬಂದ ಬಂದ ಭಾವ ಸಲೆ ಸಂದಿತ್ತು
ಎನ್ನಂಗದ ಅವಸಾನವ ಹೇಳಾ
ಚನ್ನಮಲ್ಲಿಕಾರ್ಜುನ ದೇವರ ದೇವಾ

ಭಾವಾರ್ಥ- ಅಕ್ಕ ಮಹಾದೇವಿಯವರು ಈ ವಚನದಲ್ಲಿ ತಮ್ಮ ಶರೀರವನ್ನು ವಿಸರ್ಜಿಸಲು ಸೂಕ್ತ ತಾಣವನ್ನು ಅರಸುತ್ತಿರುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅನುಭವ ಮಂಟಪದಲ್ಲಿ ಅಲ್ಲಮ ಪ್ರಭುದೇವರು ಸಾಧನಮಾರ್ಗದಲ್ಲಿ ಅಕ್ಕನವರಿಗೆ ಸಂಪೂರ್ಣ ತೃಪ್ತಿ ಸಿಗದಿರುವ ಬಗ್ಗೆ ಪ್ರಶ್ನಿಸಿದಾಗ ಅಕ್ಕನವರು ತಮ್ಮ ನಿರ್ಧಾರವನ್ನು ಹೀಗೆ ಸಮರ್ಥಿಸುತ್ತಿದ್ದಾರೆ. ಅಲ್ಲಮ ಪ್ರಭುದೇವರು ಬಯಲುಕಾಯ ಸಿದ್ದಿಯನ್ನು ಪಡೆದು ಮುಕ್ತರಾದರು. ಗುರು ಬಸವಣ್ಣನವರಿಗೆ ದಾಸೋಹ, ಜಗತ್ತಿನ ಸೇವೆ, ಮಾನವರ ಹಿತಚಿಂತನೆಗಳೇ ಅತ್ಯಂತಿಕ ಸಿದ್ದಿಗಳಾಗಿವೆ. ಚಿನ್ಮಯಜ್ಞಾನಿ ಚನ್ನಬಸವಣ್ಣನವರಿಗೆ ಜ್ಞಾನವೇ ಮಹಾಸಾಧನೆ. ಹೀಗೆ ಎಲ್ಲರೂ ಒಂದೊಂದು ಬಗೆಯಲ್ಲಿ ಭವವನ್ನು ಗೆದ್ದರು. ಸದಾಚಾರ, ವಿರಕ್ತಿಗಳನ್ನು ಆದರ್ಶವಾಗಿರಿಸಿ ಕೊಂಡು ಸಾಧನೆ ಮಾಡಿದ ಅಕ್ಕನವರು ಇನ್ನು ಈ ಲೋಕದಾಟವನ್ನು ಸಾಕುಮಾಡಿ, ಅಂಗವನ್ನು ವಿಸರ್ಜಿಸಿ, ವಿದೇಹ ಮುಕ್ತಿ ಹೊಂದಬೇಕೆಂದು ಸಂಕಲ್ಪಿಸಿ ತಮ್ಮ ಅಭೀಷ್ಟವನ್ನು ಈಡೇರಿಸಲು ಸೂಕ್ತ ಸ್ಥಾನವನ್ನು ಅರಸುವ ಪ್ರಯತ್ನದಲ್ಲಿರುವುದಾಗಿ ಹೇಳಿದ್ದಾರೆ.

361. ನಿಜವನೈದುವ ಠಾವ ಹೇಳಾ

ಲಿಂಗಾಂಗ ಸಂಗ ಸಮರಸ ಸುಖದಲ್ಲಿ ಮನ ವೇದ್ಯವಾಯಿತ್ತು.
ನಿಮ್ಮ ಶರಣರ ಅನುಭಾವ ಸಂಗದಿಂದ

ಎನ್ನ ತನು ಮನ ಪ್ರಾಣ ಪದಾರ್ಥವ
ಗುರು ಲಿಂಗ ಜಂಗಮಕ್ಕಿತ್ತು,
ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಿಯಾದೆನು
ಆ ಮಹಾಪ್ರಸಾದದ ರೂಪು ರುಚಿ ತೃಪ್ತಿಯ
ಇಷ್ಟ ಪ್ರಾಣ ಭಾವಲಿಂಗದಲ್ಲಿ ಸಾವಧಾನದಿಂದರ್ಪಿಸಿ
ಮಹಾಘನ ಪ್ರಸಾದಿಯಾದೆನು
ಇಂತೀ ಸರ್ವಾಚಾರ ಸಂಪತ್ತು ಎನ್ನ ತನುಮನ ವೇದ್ಯವಾಯಿತ್ತು
ಇನ್ನೆಲ್ಲಿಯಯ್ಯಾ ಎನಗೆ ನಿಮ್ಮಲ್ಲಿ ನಿರವಯವು?
ಇನ್ನೆಲ್ಲಿಯಯ್ಯಾ ನಿಮ್ಮಲಿ ಕೂಡುವುದು?
ಪರಮಸುಖದ ಪರಿಣಾಮ ಮನಮೇರೆದಪ್ಪಿ
ನಾನು ನಿಜವನ್ನೈದುವ ಠಾವ ಹೇಳಾ
ಚನ್ನಮಲ್ಲಿಕಾರ್ಜುನ ದೇವರ ದೇವಾ

ಭಾವಾರ್ಥ– ಅಂಗದಲ್ಲಿ ಅಳವಡಿಸಿಕೊಂಡ ಸದಾಚಾರದಿಂದ ಲಿಂಗದೇವನಲ್ಲಿ ಮನಸ್ಸು ಬೆರೆತು ಸಮರಸ ಸುಖದಲ್ಲಿ ಲೀನವಾಯಿತು. ಶರಣರ ಅನುಭಾವದ ಸಂಗದ ಪ್ರಭಾವದಿಂದ ತನುಮನಪ್ರಾಣಗಳು ಗುರುಲಿಂಗಜಂಗಮಕ್ಕೆ ಸಮರ್ಪಣೆಯಾದವು. ಗುರುಕರುಣೆಯಿಂದ ದೀಕ್ಷೆ ಪಡೆದು ಅಂಗದ ಮೇಲೆ ಲಿಂಗವ ಧರಿಸಿದ್ದರಿಂದ ತನುವು ಶುದ್ಧ ಪ್ರಸಾದವಾಯಿತು. ಅದೇ ರೀತಿ ನಿತ್ಯ ಲಿಂಗಾರ್ಚನೆ ಮಾಡಿ ಲಿಂಗೋದಕ ಮತ್ತು ಲಿಂಗ ಪ್ರಸಾದ ಸ್ವೀಕಾರದಿಂದ ಮನಸ್ಸು ಸಿದ್ಧ ಪ್ರಸಾದವಾಯಿತು. ಅರಿವು–ಆಚಾರ–ಅನುಭಾವಗಳನ್ನು ಅಳವಡಿಸಿಕೊಂಡ ಜಂಗಮರಿಂದ ಮುಕ್ತಿಯ ಮಾರ್ಗ ತಿಳಿದು ಆಚರಿಸಿದ್ದರಿಂದ ಭಾವವು ಪ್ರಸಿದ್ಧ ಪ್ರಸಾದವಾಯಿತ್ತು. ರೂಪವನ್ನು ಇಷ್ಟಲಿಂಗಕ್ಕೂ, ರುಚಿಯನ್ನು ಪ್ರಾಣಲಿಂಗಕ್ಕೂ, ತೃಪ್ತಿಯನ್ನು ಭಾವಲಿಂಗಕ್ಕೂ ಸಮಾಧಾನದಿಂದ ಸಮರ್ಪಿಸಿ ಮಹಾಘನ ಪ್ರಸಾದಿಯಾದೆನು. ಈ ಸರ್ವಾಚಾರ ಸಂಪತ್ತು ನನ್ನ ತನುಮನವನ್ನು ಆವರಿಸಿಕೊಂಡಿದೆ. ಹೀಗಾಗಿ ನನಗೆ ನಿರವಯನಾದ ನಿಮ್ಮನ್ನು ಸೇರುವುದು ಅಥವ ಕೂಡುವುದು ಎಲ್ಲಿ? ಪರಮಾನಂದಸ್ಥಿತಿಯು ಮನಸ್ಸಿನ ಗಡಿಯನ್ನು ಮೀರಿ ಹೋಗಿರುವ ಕಾರಣ ನಿನ್ನಲ್ಲಿ ಸಮರಸವಾಗುವ ಠಾವು ಯಾವುದು ಎಂದು ಅಕ್ಕನವರು ಷಟಸ್ಥಲದ ಮೂರನೆಯ ಹಂತ ಪ್ರಸಾದಿ ಸ್ಥಲದ ಸಾಧನೆಯ ಪರಿಣಾಮವನ್ನು ಅರುಹಿದ್ದಾರೆ.

(ಮುಂದುವರಿಯುವುದು)

ಶರಣ ವಾಣಿ

ದೊರೆಕೊಂಡಂತೆ ಮನ ದಣಿದಿಪ್ಪವರ
ದುಃಖಕ್ಕೆ ದೂರಾಗಿಪ್ಪವರ
ಒಳಗನರಿದು ಹೊರಗೆ ಮರೆದಿಪ್ಪವರ
ಸದಾನಂದದಲ್ಲಿ ಸುಖಿಯಾಗಿಪ್ಪವರ ಎನಗೊಮ್ಮೆ ತೋರಾ.
ಸಕಳೇಶ್ವರ ದೇವಾ, ಎನಗಿದೇ ವರವನೀವುದು ಕಂಡೆಯಾ ತಂದೆ

ಓ ಶರಣ ಚೇತನಗಳೇ....



ಶಾರದಾ ಬಸವರಾಜ್, ರಾ.ಬ.ದ ಭದ್ರಾವತಿ.

ಓ ಶರಣ ಚೇತನಗಳೇ, ಬಸವ ತತ್ವದ ಅಡಿಗಲ್ಲುಗಳೇ,
ನಿಮಗಿದೋ ಶರಣ ಶರಣಾರ್ಥಿ
ಅಂದು ಕಲ್ಯಾಣ ಕ್ರಾಂತಿಯ ಕಹಳೆಯನೂದಿದಿರಿ
ಬಸವರ ಸಮಾತೆಯ ತತ್ವಕ್ಕೆ ಬೆಲೆಕೊಟ್ಟವರು ನೀವು
ಅದಕ್ಕಾಗಿ ಅನುಭವಿಸಿದಿರಿ ಬಹಳಷ್ಟು ನೋವು ॥
ಜಗತ್ತನ್ನು ಕಣ್ತೆರೆಸುವ ಕಣ್ಣುಗಳು ವಚನ ಸಾಹಿತ್ಯ
ಆ ಕಣ್ಣುಗಳ ಉಳಿಸಲು ನಿಮ್ಮ ಕಣ್ಣುಗಳ
ಕೊಟ್ಟು ಉಳಿಸಿದಿರಾ ವಚನಾಕ್ಷಿಗಳ ॥
ಆ ಕಣ್ಣು ಕೀಳುವ ದೃಷ್ಯವ ನೆನಪಿಸಿಕೊಂಡರೆ
ಕರುಳು ಕಿವುಚಿ ಬರುತ್ತದೆ ಹೃದಯ ಬಿಕ್ಕಳಿಸಿ ಅಳುತ್ತದೆ
ನೀವು ಹೇಗೆ ಸಹಿಸಿಕೊಂಡಿರೋ ಅಷ್ಟೊಂದು ನೋವಾ ॥
ಒಂದು ಮುಳ್ಳು ಚುಚ್ಚಿದರೆ ಅಳುವ ನಾವು
ನಿಮ್ಮನ್ನು ಕಲ್ಲುಮುಳ್ಳಿನ ದಾರಿಯಲ್ಲಿ
ಅದೂ ಆನೆಯ ಕಾಲಿಗೆ ಕಟ್ಟಿ ದರದರನೆ ಎಳೆದುಕೊಂಡು ಹೋಗುವಾಗ ॥
ಹೊಟ್ಟೆಯ ಚರ್ಮ ಕಿತ್ತು ಕಿತ್ತು ಹೋಗುವಾಗ...
ರಕ್ತದ ಕೋಡಿ ಹರಿದು ಹರಿದು ಹೋಗುವಾಗ ಅದೆಷ್ಟು ನೋವು
ಹೇಗೆ ಸಹಿಸಿಕೊಂಡಿರೋ ನಾ ಬೇರೆ ಕಾಣೆ ॥
ಓಹ್.., ಅಬ್ಬಾ! ನೆನಪಿಸಿಕೊಂಡರೇ ಮೈ 'ಜುಂ' ಎನ್ನುತ್ತದೆ
ಎನ್ನ ಕಣ್ಣೀರ ಧಾರೆ ಹರಿಯುತ್ತದೆ ॥
ನಮಗಾಗಿ ಬಸವ ತತ್ವ ರಕ್ಷಣೆಗಾಗಿ ಅದೆಂತಹಾ ಕಠೋರ
ಶಿಕ್ಷೆಯ ಅನುಭವಿಸಿದಿರೋ ನೀವು ॥
ಎನ್ನ ತಂದೆಗಳೇ ನೀವಳಿದು ನಮಗಾಗಿ ಉಳಿಸಿದಿರಲ್ಲಾ ವಚನರತ್ನಗಳಾ ॥
ಓಹ್.., ಆಪತ್ ಬಾಂಧವರೇ ಜನ್ಮ ಜನ್ಮಾಂತರದ ಬಂಧುಗಳೇ
ನೀವು ಸುಟ್ಟು ಜಗತ್ತಿಗೆ ಬೆಳಕು ಕೊಟ್ಟಿರಲ್ಲಾ ॥

ಇಂದು ಎಮ್ಮ ಹೃದಯದೊಳ್ ನಿಂತು ನಮ್ಮನ್ನು
ಬಸವ ತತ್ವದೆಡೆಗೆ ಸಾಗಿಸಿ ಸಂತೋಷ
ಪಡುತಿಹಿರಲ್ಲ ವಚನ ತತ್ವ ಉಳಿಸಿದಕ್ಕೂ
ನಿಮ್ಮ ಜನ್ಮ ಸಾರ್ಥಕವಾಯಿತೆಂದು ॥
ಇಷ್ಟೊಂದು ತ್ಯಾಗಜೀವಿಗಳು ಒಂದೇ ಕಾಲದಲ್ಲಿ
ಒಂದೇ ಗುರಿಯಾಗಿ ವಿಶ್ವ ಶಾಂತಿಗಾಗಿ ॥
ಜೀವ ತೆತ್ತವರು ನೀವು ಇತಿಹಾಸ ಸಂಪುಟದಲ್ಲಿ
ರಾರಾಜಿಸುತ್ತಿರುವವರು ನೀವಲ್ಲದೆ ಬೇರಿಲ್ಲ ॥
ಬಸವ ತಂದೆಯ ಮಕ್ಕಳೇ, ಬಸವ ಧರ್ಮದ ಕುಡಿಗಳೇ,
ಶರಣ ಹರಳಯ್ಯ ಮಧುವಯ್ಯ ಶೀಲವಂತ ಶರಣರೇ ॥
ನಿಮ್ಮ ಚರಣಕ್ಕಿದು ಕೋಟಿ ಕೋಟಿ ನಮನಗಳು
ನನ್ನ ಜನ್ಮವಿರುವವರೆಗೂ ಸಲ್ಲಿಸಿದರೂ ಸಾಲದು ॥
ಮರೆಯಲಾಗದ ಮೂರು ನಂದಾದೀಪಗಳು ನೀವು ॥

****

"ಶರಣು ಶರಣಾರ್ಥಿ ಶಿವ-ಶರಣ ಹರಳಯ್ಯ"

"ಪುಳಕಗೊಳಿಸುವ ವಾಣಿ, ಹಳೆಯದನ್ನು ಕಳಿಸಿ
ಹೊಸದನ್ನು ಬೆಳೆಸಿ, ಜಾತೀಯತೆಯ ಅಳಿಸಿ
ಮಾನವೀಯತೆಯ ಉಳಿಸಿ, ಬಡತನವ ನೀಗಿಸಿ
ಒಡೆತನವ ಹೋಗಿಸುವ, ಕ್ರಾಂತಿಯ ಕರೆ
ಸುಧಾರಣೆಯ ಮೊರೆ, ಹಲವು ಲೇನಿನ್‌ರ ಮಟ್ಟಿ
ನೂರುಗಾಂಧಿಯ ಮುಟ್ಟಿ, ಹಿಟ್ಲರನ ನಾಚಿಸುವ ವಾಣಿ
ಸುಖೀ ರಾಜ್ಯದ ಕನಸು, ನನಸಾಗುವ ತತ್ತ್ವ
ಸಮತೆಯ ನಾಡಕಟ್ಟಿ, ಅಸಮತೆಯ ಅಟ್ಟಿ
ದೇವ ಸಾಮ್ರಾಜ್ಯವ ಧರೆಗಿಳಿಸುವ
ಸರ್ವರನೂ "ಬಯಲಿಗೆ" ಮುಟ್ಟಿಸುವ
ಜಗಜ್ಯೋತಿ 'ಬಸವನ' ಸಂದೇಶ
ಶರಣು ಶರಣಾರ್ಥಿ ಶಿವಶರಣ ಹರಳಯ್ಯ".

-ಬಾಣೂರು ಚನ್ನಪ್ಪ, ಚಿಕ್ಕಮಗಳೂರು

ಇಷ್ಟಲಿಂಗೋಪಾಸನೆ



– ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮೀಜಿ

ಶರಣ ಪ್ರಾಣಲಿಂಗವ ಪರಲಿಂಗವ ಮಾಡಿ
ಬಯಲಾಸೆ ಹಾಸ್ಯವಾಯಿತ್ತು. ಚಿಕ್ಕಯ್ಯಪ್ರಿಯ ಸಿದ್ಧಲಿಂಗ

ಶರಣನಾದವ ಪ್ರಾಣಲಿಂಗವನ್ನು ಶ್ರೇಷ್ಠಲಿಂಗವನ್ನಾಗಿ ಇಟ್ಟುಕೊಂಡು ಸಾಕಾರವಾದ ಇಷ್ಟಲಿಂಗದ ಮುಖಾಂತರವೇ ಬಯಲ ಸ್ವರೂಪವಾದ ಭಾವಲಿಂಗವನ್ನು ಅವಗ್ರಹಿಸಲಿಕ್ಕೆ ಸಾಧ್ಯವಾಯಿತು. ಕೆಲವರು ಆತ್ಮಲಿಂಗವಿರುವಾಗ ಇಷ್ಟಲಿಂಗವೇಕೆ ಬೇಕೆಂಬುದನ್ನು ಹೇಳುವವರಿಗೆ ಬಯಲಾಸೆ ಹಾಸ್ಯದ ಸಂಗತಿ ಎಂದು ಶರಣ ಘಟ್ಟಿವಾಳಯ್ಯ ನವರು ಕಿವಿ ಮಾತನ್ನು ಹೇಳುತ್ತಿದ್ದಾರೆ.

ಉದಾ:– ಹೊಟ್ಟೆಯೊಳಗಿನ ಶಿಶುವಿನಿಂದ ತಾಯಿಗೆ ಆನಂದವಾಗುವುದಿಲ್ಲ. ಶಿಶುವಿಗೂ, ತೊಂದರೆ ತಾಯಿಗೂ ತೊಂದರೆ. ೯ ತಿಂಗಳು ೯ ದಿವಸಗಳಾದ ಮೇಲೆ ಹೊಟ್ಟೆಯೊಳಗಿನ ಕೂಸು ಹೊರಗೆ ಬರಬೇಕು. ಎರಡೂ ಕಣ್ಣುಗಳಿಂದ ಕಣ್ತುಂಬ ನೋಡಿದಾಗ ಮಗುವಿಗೂ ತಾಯಿಗೂ ಪರಮಾನಂದವಾಗುವುದು. ಆತ್ಮನಿಂದ ಆತ್ಮನಿಗೆ ಪರಮಾನಂದವಾಗುವುದಿಲ್ಲ. ಹೊಟ್ಟೆಯೊಳಗಿನ ಶಿಶುವಿಗೆ ಜೋಗುಳ ಹಾಡಲಿಕ್ಕೆ ಬರುವುದಿಲ್ಲ. ಇದಕ್ಕೆ ಪೂರಕವಾಗಿ ವಚನವೊಂದನ್ನು ನೋಡಿ.

"ನೋಡಿರೆ ನೋಡಿರೆ ಒಂದು ವಿಚಿತ್ರವ!
ಶಿಷ್ಯನೆಂಬ ಹೆಂಡತಿಯ ಶ್ರೀಗುರುವೆಂಬ ಗಂಡನು
ಹಸ್ತಮಸ್ತಕ ಸಂಯೋಗವೆಂಬ ಕೂಟವ ಕೂಡಲು
ಷಡಕ್ಷರ ಮಂತ್ರವೆಂಬ ವೀರ್ಯವು ಚಲನೆಯಾಗಿ
ಆ ಶಿಷ್ಯನೆಂಬ ಹೆಂಡತಿಯ ಕರ್ಣವೆಂಬ ಗರ್ಭ ಪ್ರವೇಶವಾಗಲು
ಮನ ಬಸುರಾಗಿ ಕಂಗಳೆಂಬ ಯೋನಿಯಲ್ಲಿ
ಲಿಂಗವೆಂಬ ಮಗನ ಹಡೆದು ಅಂಗೈಯೆಂಬ ತೊಟ್ಟಿಲಲ್ಲಿಕ್ಕಿ
ಮಂಗಳ ಸೂತ್ರವೆಂಬ ಜೋಗುಳ ಹಾಡಿ
ಅಖಂಡೇಶ್ವರನೆಂಬ ಹೆಸರಿಟ್ಟರು ನೋಡಾ!
ಇದು ಕಾರಣ ನೀವೀಗ ನನಗೆ ಮಗನಾದಿರಿ!
ನಾನೀಗ ನಿಮಗೆ ತಾಯಿಯಾದೆನಯ್ಯ, ಅಖಂಡೇಶ್ವರಾ?

ಲೌಕಿಕವಾದಂಥ ದೃಷ್ಟಾಂತ: ಇದು ಎಲ್ಲರಿಗೂ ಗೊತ್ತಿರುವಂಥ ವಿಷಯ. ಗುರು ಶಿಷ್ಯ ಸಂಬಂಧವನ್ನು ಗಂಡ ಹೆಂಡತಿಗೆ ಹೋಲಿಸಿದ್ದಾರೆ ಷಣ್ಮುಖ ಶಿವಯೋಗಿಗಳು. ಶ್ರೀಗುರುವು ದೀಕ್ಷೆಯ ಮುಖಾಂತರ ಶಿಷ್ಯನ ಕರ್ಣದಲ್ಲಿ ಷಡಕ್ಷರ ಮಂತ್ರವನ್ನು ಉಸುರಿ ಪರುಷಮಯವಾದ ಎರಡೂ ಹಸ್ತಗಳನ್ನು ಮಸ್ತಕದ ಮೇಲೆ ಇರಿಸಿದಾಗ ಶಿಷ್ಯನ ಪೂರ್ವಕರ್ಮಗಳು ನಷ್ಟವಾಗುತ್ತವೆ. ಶಿಷ್ಯನ ಮಾಂಸಮಯ ಪಿಂಡ ಹೋಗಿ ಮಂತ್ರಮಯ ಪಿಂಡವಾಗುತ್ತದೆ. ಅಂಗ-ಲಿಂಗ ಸಾಮರಸ್ಯಕ್ಕೆ ಸನ್ನದ್ಧನಾಗುತ್ತಾನೆ. ಸದಾಚಾರ ಸಂಪನ್ನನಾಗಿ

ದಿನನಿತ್ಯ ಇಷ್ಟಲಿಂಗಾರ್ಚನೆ ಲಿಂಗಾಂಗಯೋಗ, ಅನಿಮಿಷದೃಷ್ಟಿಯಿಂದ ಮಂತ್ರ ಜಪ ಮಾಡುತ್ತಾ ಹಲವಾರು ವರ್ಷಗಳವರೆಗೆ ತೀವ್ರ ಸಾಧನೆಯ ಫಲದಿಂದ ಮನ ಬಸುರಾಗಿ ಘನವಾದ ತತ್ವ, ಸೂಪರ ಮೈಂಡ್ (***Super Mind***) ಕಂಗಳೆಂಬ ಯೋನಿಯಿಂದ ಇಷ್ಟಲಿಂಗವೆಂಬ ಮಗನ ಹಡೆದು. (ಇಲ್ಲಿ ಒಂದು ತತ್ವ ಸಿದ್ಧಾಂತವಿದೆ. ಭಾವಭರಿತನಾದ ದೇವನನ್ನು ಭಾವದಿಂದ ಮನಕ್ಕೆ ಮನದಿಂದ ಕಂಗಳಿಗೆ ಕಂಗಳಿಂದ ಕರಸ್ಥಲಕ್ಕೆ ಶ್ರೀಗುರು ಇಷ್ಟಲಿಂಗವನ್ನು ಕರುಣಿಸುತ್ತಾನೆ) ಅಂಗೈಯೆಂಬ (ಎಡಗೈ) ತೊಟ್ಟಿಲಲ್ಲಿ ಇಟ್ಟು (ಮಲಗಿಸಿ) ವಚನಗಳನ್ನು, ಗೀತೆಗಳನ್ನು, ಭಕ್ತಿರತಿಯಿಂದ ಹಾಡುತ್ತಾ ಪಾಡುತ್ತಾ ಲಿಂಗದೇವನೆಂದು ಹೆಸರಿಡುತ್ತಾನೆ, ಶಿಷ್ಯನೆಂಬ ತಾಯಿ. ಕಾರಣ ಇಷ್ಟಲಿಂಗಕ್ಕೆ, ನಾನು ತಾಯಿಯಾದೆನು ನೀವು ಮಗನಾದಿರೆಂದು, ಆಧ್ಯಾತ್ಮದ ಆತ್ಮೀಯ ಸತ್ ಸಂಬಂಧವನ್ನು ಪರಮಾನಂದದಿಂದ ಸಾಧಕರಿಗೆ, ಭಕ್ತರಿಗೆ ಶರಣರಿಗೆ ಅರುಹುತ್ತಲಿದ್ದಾನೆ. ಹೆತ್ತಾಗ ತಾಯಿಯು ಆ ಮಗುವನ್ನು, ಆ ಮಗು ತಾಯಿಯನ್ನು ನೋಡಿ ಆನಂದಿಸುವಂತೆ, ಈ ಆನಂದ ಬಂಜೆಗೇನು ಗೊತ್ತು? ಅದೇ ರೀತಿ ಸದ್ಗುರುವಿನಿಂದ ಇಷ್ಟಲಿಂಗ ದೀಕ್ಷೆ ಹೊಂದಿ ಸಾಧನೆಯನ್ನು ಮಾಡದೇ ತ್ರಾಟಕಯೋಗ ಅನುಸಂಧಾನ ಮಾಡದೇ ಭಕ್ತಿಗೀತೆ ವಚನಗಳನ್ನು ಹಾಡದೇ ಪಾಡದೇ ಇದ್ದ (ಬಂಜೆ) ನಾಸಿಕನಿಗೆ ಪರಮಾನಂದದ ಸುಖವೆಂಬುದು ಕನಸಿನ ಮಾತಾಗುವುದು. ಕೆಲವರು ಇನ್ನೊಂದು ಪ್ರಶ್ನೆ ಕೇಳುತ್ತಾರೆ. ಆತ್ಮಲಿಂಗ ಒಳಗೇ ಇದೆ, ಭವರೋಗ ಹೋಗಬಹುದಿತ್ತಲ್ಲಾ? ಇಲ್ಲಾ ಭವರೋಗ ಹೋಗುವುದಿಲ್ಲ. ಏಕೆಂದರೆ ಒಳಗಿದ್ದ ಲಿಂಗ ಹೊರಗೆ ಬರಬೇಕು. ಉದಾ:- ಒಂಧು ಆಕಳು ಬಿದ್ದು ಕಾಲು ನೋವಾಗಿದೆ, ಚಿಪ್ಪಿಗೆ ಬಾವು ಬಂದಿರುತ್ತೆ. ಡಾಕ್ಟರ್ ಸಲಹೆ ಕೊಡುತ್ತಾರೆ, ತುಪ್ಪ ಹಚ್ಚಿ ಸ್ವಲ್ಪ ಮಸಾಜ್ ಮಾಡಿರಿ ಅಂತಾ. ಆ ಶಿವಾನಂದ ಹೇಳಿದಾ ಡಾಕ್ಟರ್‌ಗೆ ಆಕಳ ಹೊಟ್ಟೆಯಲ್ಲಿ ಹಾಲು ಇದೆ, ಹಾಲು ಹೆಪ್ಪ ಆದರೆ ಮೊಸರು ಆಗಿತ್ತೆ, ಮೊಸರ ಕಡಿದಾಗ ಮಜ್ಜಿಗೆ ಆಗುತ್ತದೆ. ಅದರಲ್ಲಿ ಬೆಣ್ಣೆ ಇದೆ, ಬೆಣ್ಣೆಯೊಳಗ ತುಪ್ಪ ಇದೆ. ನೋವು ಕಡಿಮೆ ಆಗಲಿ ಅಂದಾ. ಆಗುತ್ತದೆ ಏನು? ಸಾಧ್ಯವಿಲ್ಲ. ಹಾಲು ಹಿಂಡಿಕೊಂಡು (ಕರೆದು) ಕಾಯಿಸಿ ಸ್ವಲ್ಪ ಆರಿಸಿ ಹೆಪ್ಪು ಹಾಕಿ ಮಜ್ಜಿಗೆಯನ್ನು ಕಡಗೋಲಿನಿಂದ ಕಡೆದಾಗ ಬೆಣ್ಣೆ ಬರುತ್ತದೆ. ಅದನ್ನು ಕಾಯಿಸಿದಾಗ ತುಪ್ಪ ಆಗತ್ತೆ. ಆ ತುಪ್ಪವನ್ನು ನೋವಾದ ಆಕಳಿನ ಕಾಲಿಗೆ ಹಚ್ಚಿದಾಗ ಆಕಳಿನ ಕಾಲಿನ ಬಾವು ಕಡಿಮೆಯಾಗುವುದು.

ಅದರಂತೆ ಒಳಗೆ ಇರುವಂಥಹ-ದೇಹದಲ್ಲಿರುವ ದೇಹಿ-ಆತ್ಮಲಿಂಗ ಹೊರಗೆ ಇಷ್ಟಲಿಂಗವಾಗಿ ಬರಬೇಕು. ಪೂಜೆ, ಪ್ರಾರ್ಥನೆ, ಲಿಂಗಾನುಸಂಧಾನ-ಧ್ಯಾನ ಮಾಡಿ ಆ ಲಿಂಗದೊಡನೆ ಸಾಮರಸ್ಯ ಹೊಂದಿದಾಗ ಮಾತ್ರ ಲಿಂಗಾನಂದ ಆತ್ಮಾನಂದ ದೊರೆಯಲು ಸಾಧ್ಯ

ಇನ್ನೊಂದು ಉದಾ:- ಯಾರಿಗಾದರೂ ಚರ್ಮರೋಗ ಆಗಿದ್ದರೆ ಡಾಕ್ಟರ್ ಏನು ಮಾಡುತ್ತಾರೆಂದರೆ ಅವರ ಶರೀರದಲ್ಲಿರುವ ಒಳಗಿನ ರಕ್ತವನ್ನು ಹೊರಗೆ ತೆಗೆದು ಮತ್ತೆ ಹೊರಗಿನಿಂದ ಇಂಜೆಕ್ಟ್ ಮಾಡಿದಾಗ ರೋಗ ವಾಸಿಯಾಗುವುದು. ***Auto Blood Injection*** ಒಳಗಿರುವ ರಕ್ತ ಹೊರಗೆ ಬರಬೇಕು. ಹೊರಗೆ ಬಂದ ರಕ್ತ ಮತ್ತೆ ಒಳಗೆ ಹೋಗಬೇಕು.

ಅದರಂತೆ ಒಳಗಿರುವ ದೇವರು ಹೊರಗೆ ಬರಬೇಕು ಹೊರಗೆ ಬಂದ ದೇವರು ಒಳಗೆ ಹೋಗಬೇಕು. ***Auto Blood Injection*** ತರಹ.

ಒಂದು ಕಡೆ ಧರ್ಮಗುರು ಬಸವಣ್ಣನವರು

"ಅಂತರಂಗದೊಳಗಿರ್ದ ನಿರಾಕಾರ ಲಿಂಗವನು
ಸಾಕಾರ ಲಿಂಗವ ಮಾಡಿ, ಶ್ರೀ ಗುರು ಸ್ವಾಮಿ
ಎನ್ನ ಕರಸ್ಥಲಕ್ಕೆ ತಂದು ಕೊಟ್ಟನಯ್ಯಾ
ಇಂತಪ್ಪ ಲಿಂಗವು ಅಂತರಂಗವನಾರಿಸಿ
ಅಂತರಂಗದ ಕರಣಂಗಳೇ ಕಿರಣಂಗಳಾಗಿ
ಆ ಬೆಳಗುವ ಚಿದಂಶಿಕವೇ ಪ್ರಾಣಲಿಂಗವು
ಆ ಮೂಲ ಚೈತನ್ಯವೇ ಭಾವಲಿಂಗವು
ಇದನರಿದು ನೋಡುವ ನೋಟ ಭಾವಪೂರ್ಣವಾಗಿ
ತಾನು ತಾನಾದಲ್ಲದೆ ಇದಿರಿಟ್ಟು ತೋರುವುದಿಲ್ಲವಾಗಿ
ಅಖಂಡ ಪರಿಪೂರ್ಣವಪ್ಪ ನಿಜವು ತಾನೆ ಲಿಂಗದೇವಾ".

ಎಂದು ಸ್ಪಷ್ಟವಾಗಿ ಸಾಕಾರ ನಿರಾಕಾರದ ಪರಿಕಲ್ಪನೆಯನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಇನ್ನೂ ಆಳವಾಗಿ ಮತ್ತೊಂದು ಮಾತು ಹೇಳುತ್ತಾರೆ. ಜೀವಾತ್ಮ ಪರಮಾತ್ಮಾ ಆಗೋದು, ಆ ಸ್ಥಿತಿಗೆ ಹೋದಾಗ ತಾನೇ ತಾನಾಗುತ್ತಾನೆ ಅಂತಾ.

"ಕಣ್ಣ ಬೆಳಕು ಸೂರ್ಯನ ಬೆಳಕು ಕೂಡಿ ವಸ್ತುವ ಕಾಂಬಂತೆ ನನ್ನ-ನಿನ್ನ ಬೆಳಗಿನಲ್ಲಿ ಲಿಂಗವು ಕಾಣಬಂದಿತ್ತು." ಇದರಲ್ಲಿ ಅದೆಷ್ಟು ಗಹನವಾದ ತತ್ವ ಅಡಗಿದೆ ಎಂಬುದನ್ನು ನಾವು ಸ್ವಲ್ಪ ವಿವೇಚಿಸೋಣ.

ನಮಗೆ ಒಂದು ವಸ್ತುವನ್ನು ಕಾಣಬೇಕಾದರೆ, ನಮ್ಮ ಕಣ್ಣಿನ ಬೆಳಗು ಆವಶ್ಯಕ. ಕುರುಡತನವಿದ್ದರೆ ಸೂರ್ಯನ ಬೆಳಗು ಇದ್ದರೂ ಆ ವಸ್ತುವು ಕಾಣಲಾರದು, ಕಣ್ಣಿನ ದೃಷ್ಟಿ ಶಕ್ತಿ ಇದ್ದರೂ ಸೂರ್ಯನ ಬೆಳಕು ಇಲ್ಲದಿದ್ದರೆ ಆ ವಸ್ತುವು ಕಾಣಲಾರದು. ಅಂತೂ ಎರಡರ ಅವಶ್ಯಕತೆ ಇದೆ ಎಂಬುದನ್ನು ನಾವು ಇಲ್ಲಿ ತಿಳಿಯ ಬೇಕಾಗುತ್ತದೆ. ಇಷ್ಟು ಮಾತ್ರವಲ್ಲ ಆ ರವಿಯನ್ನೇ ಕಾಣಲಾರದು ಕಣ್ಣಿನ ದೃಷ್ಟಿ ಶಕ್ತಿ ಇದ್ದರೂ ಸೂರ್ಯನ ಬೆಳಕು ಇಲ್ಲದಿದ್ದರೆ ಆ ವಸ್ತುವು ಕಾಣಲಾರದು ಅಂತೂ ಎರಡರ ಅವಶ್ಯಕತೆ ಇದೆ ಎಂಬುದನ್ನು ನಾವು ಇಲ್ಲಿ ತಿಳಿಯ ಬೇಕಾಗುತ್ತದೆ. ಇಷ್ಟು ಮಾತ್ರವಲ್ಲ ಆ ರವಿಯನ್ನೇ ನೋಡಬೇಕಾದರೂ ಅವನ ರಶ್ಮಿ ಮತ್ತು ನಮ್ಮ ಕಣ್ಣುಗಳು ಬೇಕಾಗುವತ್ತವಷ್ಟೇ. ದೀಪವನ್ನು ನೋಡಬೇಕಾದರೆ ದೀಪ್ತಿ ಮತ್ತು ಕಣ್ಣುಗಳು ಬೇಕೇ ಬೇಕು.

"ನನ್ನ-ನಿನ್ನ ಬೆಳಗಿನಲ್ಲಿ ಲಿಂಗವು ಕಾಣಬಂದಿತ್ತೆಂದರೆ" ನನ್ನ ಅಂತರಂಗದ ಜ್ಯೋತಿ (ಚಿದಂಶಿಕವಾದ ಪ್ರಾಣಲಿಂಗ)ಯೆಂಬ ದೀಪ್ತಿಯೂ, ನೀ ಕೊಟ್ಟ ಕರಸ್ಥಲದ ಜ್ಯೋತಿ ಅಂದರೆ ಗುರುವಿತ್ತ ಇಷ್ಟಲಿಂಗವೆಂಬ ಕಣ್ಬೆಳಗೂ ಇದ್ದರೆ ದೇವರು ಎಂಬ ದೀಪವನ್ನು ಕಾಣಲು ಸಾಧ್ಯ ಎಂದು ವಚನ ಪ್ರತಿಪಾದಿಸುತ್ತದೆ.

ನನ್ನ ಅರುಹಿನ ಬೆಳಗು ದೀಪ್ತಿಯಾಗಿಯೂ, ನಿನ್ನ ಕುರುಹಿನ ಬೆಳಗು ಕಣ್ಣಾಗಿಯೂ ಪರಿಣಮಿಸಿ ಇರುಹಿನ ಲಿಂಗವೆಂಬ ದೀಪವನ್ನು ಕಾಣಲು ಸಹಾಯಕವಾದುದೆಂಬದನ್ನು ಬೇರೆ ಹೇಳಬೇಕಾಗಿಲ್ಲ. ಅಂದ ಮೇಲೆ ಇಷ್ಟಲಿಂಗವೆಂಬ ಕಣ್ಣು ಇಲ್ಲದೆ, ಕುರುಡನಾಗಿ (ಭವಿಯಾಗಿ) ದೇವನನ್ನು ಕಾಣಲು ಸಾಧ್ಯವಿಲ್ಲವೆಂಬುದು ಈ ವಚನದ ಮರ್ಮವು.

ರಶ್ಮಿಯಿಂದ ರವಿಯನ್ನು ನಿರೀಕ್ಷಿಸುವಂತೆ, ಚಂದ್ರಿಕೆಯಿಂದ ಚಂದ್ರನನ್ನು ಕಾಣುವಂತೆ, ದೀಪ್ತಿಯಿಂದ ದೀಪವನ್ನು ನೋಡುವಂತೆ, ಚಿಜ್ಯೋತಿ ಅರ್ಥಾತ್

ಚಿದಂಶಿಕವಾದ ಪ್ರಾಣಲಿಂಗದಿಂದ ಪರಂಜ್ಯೋತಿ ಮೂಲ ಚೈತನ್ಯವಾದ ಭಾವಲಿಂಗವನ್ನು ಸಂದರ್ಶಿಸಬೇಕು. ಆಗ ಮಾತ್ರ ಜೀವಾತ್ಮನು (ಪ್ರತ್ಯಗಾತ್ಮನು) ಪರಮಾತ್ಮನಾಗುವನು. ಅಖಂಡ ಪರಿಪೂರ್ಣವಪ್ಪ ನಿಜಲಿಂಗದಲ್ಲಿ ಒಡವೆರೆದು ಒಂದಾಗುವನು. ಇಲ್ಲಿ ಒಂದು ಮಾತನ್ನು ನೆನಪಿಡಬೇಕಾಗಿದೆ. ರವಿ-ರಶ್ಮಿ ಚಂದ್ರ-ಚಂದ್ರಿಕೆ, ದೀಪ-ದೀಪ್ತಿ, ಇವುಗಳ ಸಂಬಂಧವು ಬಿಟ್ಟಿ ಬೇರಾಗದ, ಬೆರೆಸಿ ಒಂದಾಗದ ಅವಿನಾಭಾವ ಸಂಬಂಧವು. ಅದರಂತೆ ಸತ್‌ಸ್ವರೂಪದ ಭಾವಲಿಂಗ ವಿಶ್ವಾತ್ಮ, ಚಿತ್‌ಸ್ವರೂಪದ ಪ್ರಾಣಲಿಂಗ - ಜೀವಾತ್ಮಗಳ ನಡುವೆ ಅವಿನಾಭಾವ ಸಂಬಂಧವಿದೆ.

ತೋರಿಕೆಯಲ್ಲಿ ಭಿನ್ನವಾಗಿ ಕಾಣುವ ಈ ಸತ್ ಸ್ವರೂಪದ ಪರಮಾತ್ಮ ಮತ್ತು ಚಿತ್‌ಸ್ವರೂಪದ ಪ್ರತ್ಯಗಾತ್ಮರನ್ನು, ಆನಂದ ರೂಪವಾದ ಇಷ್ಟಲಿಂಗವು ಅವರ ನಡುವೆಯ ಭಿನ್ನತೆಯೆಂಬ ಭಾವುಕ ಕಲ್ಪನೆಯನ್ನು ಅವರಿಬ್ಬರೂ ಒಂದಾಗುವಂತೆ ಮಾಡುತ್ತದೆ.

ಆಹಾ॥ ನೋಡಿದಿರಾ ಇಷ್ಟಲಿಂಗದ ಮರ್ಮ ಮತ್ತು ಅವಶ್ಯಕತೆಗಳನ್ನು! ಆತ್ಯಂತಿಕ ಇಷ್ಟವಾದ ಪರಮಾತ್ಮನ್ನು ಪಡೆಯಲು ಇಷ್ಟಲಿಂಗವನ್ನು ಕಟ್ಟಿಕೊಳ್ಳಬೇಕು. ಇಂಥ ಇಷ್ಟಲಿಂಗದ ನಿಷ್ಠೆಯನ್ನಳವಡಿಸಿಕೊಂಡು ಅಕ್ಕಮಹಾದೇವಿ ಶರಣಸತಿಯಾಗಿ ಲಿಂಗಪತಿಯನ್ನು ಒಲಿಸುವ ಆಧ್ಯಾತ್ಮಿಕ ಪ್ರೇಯಸಿಯಾಗಿ, ವಿರಹಿಣಿಯಾಗಿ ಪ್ರಾಯದ ಪಾವಟಿಗೆಗಳನ್ನು ಹತ್ತುತ್ತಿದ್ದಾಳೆ.

"ಅಂಗೈಯೊಳಗಣ ಲಿಂಗವ ಪೂಜಿಸುತ್ತ
ಮಂಗಳಾರತಿಗಳನು ತೊಳಗಿ ಬೆಳಗುತ್ತಲಿರ್ದೆ ನೊಡಯ್ಯಾ
ಕಂಗಳ ನೋಟ ಕರುವಿಟ್ಟ ಭಾವ, ಹಿಂಗದ ಮೋಹ,
ತೆರಹಿಲ್ಲದಿರ್ದೆ ನೋಡಯ್ಯಾ; ಚನ್ನಮಲ್ಲಿಕಾರ್ಜುನಯ್ಯಾ
ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ."
"ಲಿಂಗವು ಬಂದೆನ್ನ ಅಂಗದೊಳು ನೆಲೆಸಲು
ಅಂಗವು ಲಿಂಗದೊಳಗಾದ ಕಾರಣವು ಹಿಂಗಿದವು ಎನ್ನ ಭವಗಳು."

ಈ ವಚನಗಳನ್ನು ಪರಾಮರ್ಶಿಸುತ್ತ ಹೋದಂತೆ ಅಂಗ ಲಿಂಗ ಸಾಮರಸ್ಯಕ್ಕೆ ಇಷ್ಟಲಿಂಗದ ಮಹತಿ ವರ್ಣಣಾತೀತವಾಗಿದೆ.

ಲಿಂಗಾಂಗಯೋಗ (ಶಿವಯೋಗ) ಅನ್ನುವ ಟ್ರೇನನ್ನು ಧರ್ಮಗುರು ಬಸವಣ್ಣನವರು ಕಂಡು ಹಿಡಿದರು. ಅದರಂತೆ ಈ ಭೌತಿಕ ಟ್ರೇನನ್ನು ಸ್ಟಿವೆನ್‌ಸನ್ ಕಂಡು ಹಿಡಿದಿದ್ದಾರೆ. ಎಲ್ಲಾ ಮಾನವರು ಹತ್ತಿ ಕುಳಿತು ಪ್ರಯಾಣಿಸಿ ತಮ್ಮ-ತಮ್ಮ ಊರಿಗೆ ಹೋಗಿ ಮುಟ್ಟಲಿ ಅನ್ನುವ ಒಳ್ಳೆಯ ಉದ್ದೇಶದಿಂದ ತಯಾರಿಸಿದ. ಈ ಲಿಂಗಾಂಗಯೋಗ (ಶಿವಯೋಗ) ಅನ್ನುವ ಆಧ್ಯಾತ್ಮ ಟ್ರೇನ್ ಮಾನವತ್ವದಿಂದ ದೈವತ್ವಕ್ಕೆ ಹೋಗುತ್ತದೆ. ಈ ಭೌತಿಕ ಟ್ರೇನು ಉದಾ:- ಬೆಂಗಳೂರಿನಿಂದ ಕನ್ಯಾಕುಮಾರಿಯವರೆಗೆ ಹೋಗುತ್ತದೆ. ಕೆಲವರು ಮಧ್ಯದಲ್ಲಿ ಯಾವುದೇ ಸ್ಟೇಶನ್‌ದಿಂದಲೂ ಹತ್ತಬಹುದು. ಅದರಂತೆ ಗುರು ಬಸವಣ್ಣನವರು ತಯಾರಿಸಿದ ಲಿಂಗಾಂಗಯೋಗ (ಶಿವಯೋಗ) ಅನ್ನುವಂಥಹ ಈ ಆಧ್ಯಾತ್ಮ ಟ್ರೇನ್‌ನಲ್ಲಿ ಗುರು ಬಸವಣ್ಣನವರು ಇದ್ದ ಕಾಲದಲ್ಲಿ ಕೆಲವರು ಹತ್ತಿದರು. ಈಗಲೂ ಹತ್ತಿದ್ದಾರೆ. ಎಲ್ಲರೂ ಸಹ ಪ್ರಯಾಣಿಕರು. ಆಯಾ ಕಾಲದಲ್ಲಿ ಸಹಸ್ರಾರು ಜನ ಪ್ಯಾಸೆಂಜರ್ ಹತ್ತಿದ್ದಾರೆ. ಎಲ್ಲರೂ ಸರಿ ಸಮಾನರೆ.

ಮಹಾನ್ ಶರಣ

ಚಿನ್ಮಯಜ್ಞಾನಿ ಅವಿರಳಜ್ಞಾನಿ ಚನ್ನಬಸವೇಶ್ವರರು



- ದಿಲೀಪ್.ಬಿ. ಲಿಂಗಾಯತ್

ಬಸವಾದಿ ಶರಣರ ಪವಿತ್ರ ಭೂಮಿ ಪ್ರಗತಿಪರ ಚಿಂತಕರ ತವರೂರು ಕರ್ನಾಟಕದ ಉತ್ತರ ಭಾಗದಲ್ಲಿ ಕೂಡಲ ಸಂಗಮದ ಸನಿಹದಲ್ಲಿರುವ ಬ್ರಹ್ಮಪುರಿ ಎಂಬ ಊರು. ಕಣ್ವ ಶಾಖೆಯ ಕೌಂಡಿಣ್ಯ ಗೋತ್ರದ ಸ್ಮಾರ್ತ ಸಂಪ್ರದಾಯದ ಶೈವ ಬ್ರಾಹ್ಮಣ ದಂಪತಿಗಳಾದ ಶಿವಸ್ವಾಮಿ ಮತ್ತು ಅಕ್ಕನಾಗಲಾಂಬಿಕೆ. ಅಕ್ಕನಾಗಲಾಂಬಿಕಾ ತಾಯಿ ಗುರುಬಸವಣ್ಣನವರ ಸಹೋದರಿ. ಗುರು ಬಸವಣ್ಣನವರು ಚಿಕ್ಕವರಿದ್ದಾಗಿಂದಲೂ ಅವರ ವೈಚಾರಿಕ ವಿಚಾರಗಳಿಗೆ ಬೆಂಬಲ ನೀಡಿದವರು. ಅಕ್ಕನಾಗಲಾಂಬಿಕಾ ತಾಯಿ ಗುರುಬಸವಣ್ಣನವರು ಕೂಡಲ ಸಂಗಮದಲ್ಲಿ ವಿದ್ಯಾಭ್ಯಾಸ ಪೂರೈಸಿ ಪರಮಾತ್ಮನಿಂದ ಆದೇಶ ಪಡೆದು ಮಂಗಳವೇಡೆಗೆ ಹೊರಡುವರು. ಅವರೊಟ್ಟಿಗೆ ಅಕ್ಕನಾಗಲಾಂಬಿಕೆ ಜೊತೆಯಾಗಿ ಸಾಗುವರು. ಅಲ್ಲಿಂದ ಕಲ್ಯಾಣಕ್ಕೆ ಗುರು ಬಸವಣ್ಣನವರು ಹೊರಡುವಾಗ ಶರಣ ದಂಪತಿಗಳಾದ ಶಿವಸ್ವಾಮಿ, ಅಕ್ಕನಾಗಲಾಂಬಿಕೆ ಹೊರಡುವರು. ಅಕ್ಕನಾಗಲಾಂಬಿಕಾ ತಾಯಿ ಗುರುಬಸವಣ್ಣನವರ ಕ್ರಿಯಾಶಕ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಶಿವಸ್ವಾಮಿಯವರು ಮಹಾಮನೆಯ ಉಗ್ರಾಣದ ಮೇಲ್ವಿಚಾರಣೆಯ ಕಾಯಕ ನಡೆಸುತ್ತಿದ್ದರು. ಈ ದಂಪತಿಗಳಿಗೆ ನಂದನನಾಮ ಸಂವತ್ಸರದ ಕ್ರಿ.ಶ.೧೧೭೨ ವೈಶಾಖ ಶುದ್ಧ ಪಾಡ್ಯ ಮಂಗಳವಾರ ಕೃತಿಕಾ ನಕ್ಷತ್ರದ ಪ್ರಾತಃಕಾಲದಲ್ಲಿ ಮೃಣ್ಮಯ ಶರೀರಧಾರಿಯಾಗಿ ಚನ್ನಬಸವಣ್ಣನವರು ಜನಿಸಿದರು. ಗುರು ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮದ ಸಂಸ್ಕಾರವಾದ ಗರ್ಭಲಿಂಗಧಾರಣೆ ಪಡೆದ ಇವರು ಅನುಭವ ಮಂಟಪದ ಪರಿಸರದಲ್ಲಿ ಗುರು ಬಸವಣ್ಣನವರ ದಿವ್ಯ ಅನುಗ್ರಹದಲ್ಲಿ ಅನೇಕ ಶರಣ ಸಮೂಹದಲ್ಲಿ ಬೆಳೆದ ಚನ್ನಬಸವಣ್ಣನವರು ವಯಸ್ಸಿಗೆ ಮೀರಿದ ಜ್ಞಾನ ಅನುಭಾವಗಳನ್ನು ಹೊಂದಿದರು. ಚನ್ನಬಸವಣ್ಣನವರ ಸಂಸ್ಕಾರಭರಿತ ಜ್ಞಾನವನ್ನು ಕಂಡು "ಇಂದೇ ಹುಟ್ಟಿದ ಕೂಸಿಗೆ ಇಂದೇ ಜವ್ವನವಾಯಿತು" ಎಂದು ಧರ್ಮಪಿತರು ನುಡಿದರು. ಕರ್ಮಯೋಗಿ ಸಿದ್ಧರಾಮೇಶ್ವರರು ಹಾಕಿದ ತಾತ್ವಿಕ ಪ್ರಶ್ನೆಗಳಿಗೆ ಉತ್ತರಿಸಿ ಅವರನ್ನು ಪರಿವರ್ತಿಸಿ ಅವರಿಗೆ ಇಷ್ಟಲಿಂಗ ದೀಕ್ಷೆ ನೀಡಿದ್ರು, ದೀಕ್ಷಾನುಗ್ರಹ ಪಡೆದ ಸಿದ್ಧರಾಮೇಶ್ವರರು "ಚನ್ನಬಸವಣ್ಣನ ಕೃಪೆ ಎನ್ನ ನಿಂತು ಮಾಡಿತ್ತು ಕಾಣಾ ಪ್ರಭುವೇ ಕಪಿಲಸಿದ್ಧಮಲ್ಲಿಕಾರ್ಜುನ" ಎಂದು ಕೊಂಡಾಡುವರು. ವಯಸ್ಸಿನಲ್ಲಿ ತಮಗಿಂತಲೂ ಹಿರಿಯರಾದ ಸಿದ್ಧರಾಮರಿಗೆ ಇಷ್ಟಲಿಂಗ ದೀಕ್ಷೆ ನೀಡಿ ಶ್ರೇಷ್ಠರನ್ನಾಗಿಸಿದರು. ಇವರ ಅಪಾರ ಜ್ಞಾನ ಸಂಸ್ಕಾರವನ್ನು ಕಂಡು ಗುರು ಬಸವಣ್ಣನವರು ಹೀಗೆ ಹೇಳುವರು.

ಬಿತ್ತದೆ ಬೆಳೆಯದೆ ಬೆಳೆದ ಹೆಬ್ಬೆಳಸಿನ ರಾಶಿಯ ನೋಡಾ !
ಸುಗಂಧ ಬಂಧುರದಂತೆ ಹುಟ್ಟುತ್ತಲೇ ಪರಿಮಳ !
ಆದಿ ಅನಾದಿಯಿಲ್ಲದ ಮುನ್ನ ತನ್ನಿಂದವೆ ತಾನಾಗಿರ್ದ ಕಾರಣ
ಮುಟ್ಟದೆ ತಟ್ಟದೆ ಗುರುಕಾರುಣ್ಯವ ಪಡೆದು, ಲಿಂಗ ಸಯವಾಗಿ
ಎನಗೆ ಗತಿಪಥವ ತೋರಿಸಬೇಕೆಂದು ಆಗಾದನು,
ಲಿಂಗದೇವರಲ್ಲಿ ಚನ್ನಬಸವಣ್ಣನು.

ತಾಯಿಯ ಗರ್ಭದಲ್ಲಿರುವಾಗಲೇ ಲಿಂಗಧಾರಣೆ ಮತ್ತು ಉದಾತ್ತ ಸಂಸ್ಕಾರ, ಸಣ್ಣ ವಯಸ್ಸಿನಲ್ಲೇ ಶರಣರ ಒಡನಾಟ, ಗುರು ಬಸವಣ್ಣನವರ ಅನುಗ್ರಹ ಹಾಗೂ ಮಾರ್ಗದರ್ಶನ– ಇದೆಲ್ಲದರ ಫಲಶ್ರುತಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರು. ಅವರ ಪ್ರಗತಿ ನೋಡಿ ಸ್ವತಃ ಬಸವಣ್ಣನವರಿಗೆ ಆಶ್ಚರ್ಯ– ಅವರಿಂದ ಉದ್ಗಾರ, "ಬಿತ್ತದೆ ಬೆಳೆಯದೆ ಬೆಳೆದ ಹೆಬ್ಬೆಳಸಿನ ರಾಶಿಯ ನೋಡಾ!" ಎಂದು. ದೀಕ್ಷೆಗೆ ಮೊದಲೇ ಮಹಾ ಜ್ಞಾನಿ. ಸುಗಂಧ ಬಂಧುರದಂತೆ ಹುಟ್ಟುತ್ತಲೇ ಪರಿಮಳ. ಮರುಗ, ದವನ ಮುಂತಾದವು ಹುಟ್ಟುತ್ತಲೇ ಪರಿಮಳ ಹೊಂದಿರುವಂತೆ ಚನ್ನಬಸವಣ್ಣನ ಜ್ಞಾನ. ಹಿಂದಿನ ಜನ್ಮದಿಂದಲೇ ಬಂದ ಸಂಸ್ಕಾರದಿಂದಾಗಿ ಸ್ವಯಂ ಜ್ಞಾನಿಯಾಗಿಯೇ ಹುಟ್ಟಿದ್ದಾನೆ. ಪಂಚೇಂದ್ರಿಯಗಳ ಉಪಟಳವಾಗಲೀ ಅರಿಷಡ್ವರ್ಗಗಳ ಬಾಧೆಯಾಗಲಿ ಮುಟ್ಟದೆ, ತಟ್ಟದೆ ನಿರ್ವಿಕಾರಿಯಾಗಿ ಗುರುಕಾರುಣ್ಯವನ್ನು ಪಡೆದು, ಲಿಂಗಧಾರಿ ಯಾಗಿದ್ದಾನೆ. ವಯಸ್ಸಿನಲ್ಲಿ ನನಗಿಂತ ಚಿಕ್ಕವನಾದರೂ ಒಮ್ಮೊಮ್ಮೆ ಈತನ ಮಾತು ಕಣ್ತೆರೆಸುವಂತೆ ಇರುತ್ತದೆ. ನನಗೆ ಸಹಾಯಕನಾಗಲೆಂದೇ (ಬೌದ್ಧಿಕ ಸಂಗಾತಿ ಯಾಗಲೆಂದು) ಈತ ಹುಟ್ಟಿ ಬಂದಂತೆ ತೋರುತ್ತದೆ.

ಹೀಗೆ ಚನ್ನಬಸವಣ್ಣನವರು ಸೇರಿದಂತೆ ಅನೇಕ ಶರಣ ಕುಲವು ಸಮಾನತೆಯನ್ನು ಅನುಭವದ ಮೂಲಕ ಸಾರುತ್ತಿದ್ದರು. ಗುರು ಬಸವಣ್ಣನವರ ಅಗಾಧ ಯೋಜನೆ, ಸಮಾಜದಲ್ಲಿ ತರುತ್ತಿದ್ದ ಅಪೂರ್ವ ಪರಿವರ್ತನೆಗಳನ್ನು ಕಂಡು ಒಳಗೆ ತಳಮಳಿಸುತ್ತಿದ್ದ ಸಂಪ್ರದಾಯವಾದಿಗಳು ಅಂತರ್ವರ್ಣೀಯ ವಿವಾಹದ ನೆಪದಲ್ಲಿ ಸಿಡಿದೆದ್ದರು. ಗುರು ಬಸವಣ್ಣನವರಿಗೆ ಗಡಿಪಾರು ಶಿಕ್ಷೆ ವಿಧಿಸುವಂತೆ ಮಾಡಿದರು. ಅಲ್ಲಮಪ್ರಭುಗಳು ಕದಳಿಯ ಬನಕ್ಕೆ ಹೊರಡಲು ಸಿದ್ಧರಾದರು. ಆಗ ಶೂನ್ಯಪೀಠದ ಅಧಿಕಾರವನ್ನು ಚನ್ನಬಸವಣ್ಣನವರಿಗೆ ಹಸ್ತಾಂತರಿಸಲಾಯ್ತು. ರಾಕ್ಷಸ ನಾಮ ಸಂವತ್ಸರದ ಕಾರ್ತಿಕ ಶುದ್ಧ ಪಂಚಮಿಯಂದು ಸೋಮವಾರ ರಾತ್ರಿ ಪಟ್ಟಾಧಿಕಾರವು ನೆರವೇರಿತು. ಎಲ್ಲ ಶರಣರನ್ನು ಕೂಡಿಸಿ ಚನ್ನಬಸವಣ್ಣನವರಿಗೆ ಗುರು ಬಸವಣ್ಣನವರು ಹೇಳಿದರು. ರಾಜಾಜ್ಞೆಯಾಗಿದೆ. ಇನ್ನು ನಾನು ಹೊರಡುತ್ತೇನೆ. ಶರಣರು ಮತ್ತು ವಚನ ಸಾಹಿತ್ಯ ನನ್ನ ಉಸಿರು. ಅದರ ರಕ್ಷಣೆ ಮಾಡುವುದು ತಮ್ಮೆಲ್ಲರ ಆದ್ಯ ಕರ್ತವ್ಯವೆಂದು ಗುರು ಬಸವಣ್ಣನವರು ಹೇಳುವರು.

ನಾನೊಂದು ಕಾರಣ ಮರ್ತ್ಯಕ್ಕೆ ಬಂದೆನು.
ಬಂದ ಬಳಲಿಕೆಯ ಪರಿಹರಿಸಲಿಕೆ ಚನ್ನಬಸವಣ್ಣ ಬಂದನು
ಇನ್ನು ಬಾರದಂತೆ ಪ್ರಭುದೇವರು ಬಂದರು.
ಇದಕ್ಕೆ ಆಜ್ಞಾಕರ್ತ ಮಡಿವಾಳ ಮಾಚಿತಂದೆ ಬಂದನು

ನಾನಿನ್ನಾರಿಗಂಜೆನು, ಬದುಕಿದೆನು ಕಾಣಾ ಲಿಂಗದೇವಾ
ಎಂದು ಗುರು ಬಸವಣ್ಣನವರು ಹೊರಡುತ್ತಾರೆ.

ಗುರು ಬಸವಣ್ಣನವರ ನಿರ್ಗಮನದ ನಂತರ ಕಲ್ಯಾಣದಲ್ಲಿ ಅಂತರ್‌ಜಾತಿಯ ವಿವಾಹದಲ್ಲಿ ಭಾಗವಹಿಸಿದ್ದಕ್ಕಾಗಿ ಮಧುವರಸ, ಶೀಲವಂತ, ಹರಳಯ್ಯನವರಿಗೆ ಕಣ್ಣು ಕೀಳಿಸುವ ಶಿಕ್ಷೆ ಮತ್ತು ಎಳೆಹೂಟೆ ಶಿಕ್ಷೆಯಾಯಿತು. ಈ ಕ್ರಾಂತಿಗೆ ಬೆಂಬಲ ನೀಡಿದ ಸಾವಿರಾರು ಶರಣರ ವಧೆಯಾಯಿತು. ಗುರು ಬಸವಣ್ಣನವರ ದಿವ್ಯ ಆದೇಶದಂತೆ ವಚನ ಸಾಹಿತ್ಯ ಸಂಪತ್ತು ರಕ್ಷಿಸಲು ಚಿನ್ಮಯಜ್ಞಾನಿ ಚನ್ನಬಸವಣ್ಣನವರ ನೇತೃತ್ವದಲ್ಲಿ ಫಾಲ್ಗುಣ ಮಾಸದ ಹುಣ್ಣಿಮೆಯ ಮರುದಿನ ಶರಣರ ತಂಡ ಸಹ್ಯಾದ್ರಿಯತ್ತ ಸಾಗಿತ್ತು. ಚನ್ನಬಸವಣ್ಣನವರು ಸೊನ್ನಲಾಪುರಕ್ಕೆ ಹೋಗಿ ಸಿದ್ಧರಾಮೇಶ್ವರರಿಗೆ ಶೂನ್ಯಪೀಠದ ಅಧಿಕಾರವನ್ನು ಹಸ್ತಾಂತರಿಸಿದ ಮುನ್ನಡೆಸಿದರು. ಜಾತಿವಾದಿಗಳ ಪ್ರಚೋದನೆಯಿಂದ ಬೆನ್ನಹತ್ತಬಹುದಾದ ಸೈನ್ಯದ ನಿರೀಕ್ಷೆಯಲ್ಲಿ ಸಾಹಿತ್ಯ ಹೊತ್ತುಹೊರಟ ಈ ತಂಡದ ನೇತೃತ್ವ ವಹಿಸಿದ ಮಹಾಪುರುಷರೆಂದರೆ ಚಿನ್ಮಯಜ್ಞಾನಿ ಚನ್ನಬಸವಣ್ಣ, ಮಡಿವಾಳ ಮಾಚಿತಂದೆ, ವೀರಮಾತೆ ಅಕ್ಕನಾಗಲಾಂಬಿಕೆ. ಕಾದರವಳ್ಳಿಯ ಬಳಿ ನಡೆದ ಹೋರಾಟದಲ್ಲಿ ಘಾಸಿಗೊಂಡರಾದರೂ ಮುರುಗೋಡಿನ ಬಳಿ ನಡೆದ ಹೋರಾಟದಲ್ಲಿ ಜಯ ಸಂಪಾದಿಸಿದರು.

ನಳನಾಮ ಸಂವತ್ಸರದ ವೈಶಾಖ, ಬುಧವಾರ ರೋಹಿಣಿ ನಕ್ಷತ್ರದಲ್ಲಿ ಚನ್ನಬಸವಣ್ಣನವರು ತಮ್ಮೊಡನೆ 12000 ಶರಣರನ್ನು ಕರೆದುಕೊಂಡು ಉಳಿವಿಗೆ ಬಂದು ಬೀಡುಬಿಟ್ಟರು. ಸಾಹಿತ್ಯವನ್ನು ಗವಿಗಳಲ್ಲಿ, ಸುರಕ್ಷಿತ ತಾಣಗಳಲ್ಲಿ ಇಡಲು ಸಮರ್ಥರಾದರು. ವಚನ ಸಾಹಿತ್ಯ ರಕ್ಷಣೆಯನ್ನು ಜನಪದರು ಹೀಗೆ ಹೇಳುವರು.

ಹರಭಜನೆ ಗುರುಸೇವೆ ಉರುತರದಿ ಮಾಡುತ್ತಲಿ
ಶರಣ ಗಣಕೂಡಿ, ಉಳವಿಯೊಳು। ಮರುದಿನವೆ
ನೆಲೆಸಿದರು ತತ್ವ ಮಂಟಪವ ॥

ಚನ್ನಬಸವೇಶ್ವರನು ಉನ್ನತನುಭಾವಿಗಳು
ಚನ್ನಮಯಾಯಿತ್ತು ಆ ಉಳವಿ। ಲಿಂಗಿಗಳ
ಕನ್ನೆ ಭಕ್ತಿಯ ಗೂಡಾತು॥

ಅಂದು ನಳನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿಯಂದು ಕೂಡಲ ಸಂಗಮ ಸುಕ್ಷೇತ್ರದಲ್ಲಿ ಲಿಂಗದೇವನ ಆಜ್ಞೆಯಂತೆ ಇಷ್ಟಲಿಂಗಪೂಜೆ ತ್ರಾಟಕ ಯೋಗದ ಮೂಲಕ ಪರಮಾತ್ಮನಲ್ಲಿ ಒಂದಾಗುತ್ತಾರೆ ಗುರು ಬಸವಣ್ಣ. ಇತ್ತ ಉಳವಿಗೆ ಬಂದು ಸುಮಾರು 6 ತಿಂಗಳ ಕಾಲ, ಅಧ್ಯಯನ, ಲಿಂಗಾಂಗಯೋಗಾನುಸ್ಠಾನದಲ್ಲಿ ತಲೀನರಾಗಿ ಚನ್ನಬಸವಣ್ಣನವರು ನಳನಾಮ ಸಂವತ್ಸರದ ಕಾರ್ತಿಯ ಮಾಸ ಹುಣ್ಣಿಮೆಯಂದು ಉರಿಯುಂಡ ಕರ್ಪೂರದಂತೆ ಲಿಂಗದೇವನಲ್ಲಿ ಲೀನವಾಗುವರು.

*****

ಸಮಸ್ಯೆ-ಸಮಾಧಾನ

–ಪೂಜ್ಯ ಬಸವಕುಮಾರ ಸ್ವಾಮೀಜಿ

1. ಸಮಸ್ಯೆ :– ನಾವು ಲಿಂಗಧಾರಿಗಳಾದ ಮೇಲೆ ಇಷ್ಟಲಿಂಗ ಪೂಜಾ ನಂತರ ದೊರೆಯುವ ಪಾದೋದಕ, ಪ್ರಸಾದ ಹೊರತುಪಡಿಸಿ ಬೇರೆ ಯಾವ ಪ್ರಸಾದವನ್ನು ತೆಗೆದುಕೊಳ್ಳಬಾರದಲ್ಲವೆ?

ಸಮಾಧಾನ (ಉತ್ತರ) :– "ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗಿ ಹೊಟ್ಟೊಡೆಯಾಗಿ ಬೀಳುವ ಲೊಟ್ಟೀ ಮಾಳರ ಕಂಡರೆ ಮೆಟ್ಟಿದ ಎಡ ಪಾದರಕ್ಷೆಯ ತೆಗೆದು ಲಟಲಟನೆ ಹೊಡೆಯೆಂದ ನಮ್ಮ ಅಂಬಿಗರ ಚೌಡಯ್ಯ ನಿಜ ಶರಣ". ಗಣಾಚಾರಿ ಶರಣರು ಇಷ್ಟಲಿಂಗವನ್ನು ಬಿಟ್ಟು ಬೇರೆ ದೈವಕ್ಕೆ ಎರಗದೆ ಅದರ ಎಂಜಲವನ್ನು ಬಿಟ್ಟು ಬೇರೆ ದೈವಕ್ಕೆ ಎರಗದೆ, ಅದರ ಎಂಜಲವನ್ನು ತನ್ನದೆ ಇರಬೇಕೆಂದು ಎಚ್ಚರಿಸುವ ಏಕದೇವೋಪಾಸನೆಯನ್ನು ಕಡ್ಡಾಯವಾಗಿ ಅರ್ಜಿಸಿ ಕೊನೆಗೆ ಗುರು ಬಸವ ಕರುಣೋದಕ, ಲಿಂಗದೇವ ಕರುಣೋದಕ, ಜಂಗಮ-ಶರಣರ ಕರುಣೋದಕವನ್ನು ಅದರ ಜೊತೆಗೆ ಕರುಣ ಪ್ರಸಾದವನ್ನು ತೆಗೆದುಕೊಳ್ಳಲು ಹೇಳಿದ್ದಾರೆ. ಶ್ರೀಗುರು ಬಸವಂಗೆ ಶರಣಾಗಿಹೆ, ಲಿಂಗದೇವನಿಗೆ ಶರಣಾಗಿಹೆ, ಶರಣ ಗಣಕ್ಕೆ ಶರಣಾಗಿಹೆ, ಕರುಣ ಪ್ರಸಾದ ಸ್ವೀಕರಿಸಿಹೆ, ಗಣ ಪದವಿಯನ್ನು ನಾ ಹೊಂದಿಹೆ.

2.ಸಮಸ್ಯೆ :– ಆದರೆ ಬಸವ ಕಲ್ಯಾಣದಲ್ಲಿ ಪ್ರತಿ ಗುಹೆಗಳಲ್ಲಿ ಪೂಜೆ ಮಾಡಿ ಹೋದ ಭಕ್ತರಿಗೆಲ್ಲ ತೀರ್ಥ ಪ್ರಸಾದ ಕೊಡುತ್ತಾರಲ್ಲಾ. ಇದನ್ನು ಇಷ್ಟಲಿಂಗಧಾರಿಗಳು ತೆಗೆದುಕೊಳ್ಳಬಹುದೇ ? ಮತ್ತೆ ಇದು ಸ್ಥಾವರವಾಗಲಿಲ್ಲವೆ ? ಮುಂದಿನ ಪೀಳಿಗೆಗೆ ಇತಿಹಾಸ ಬೇಕು. ಶರಣರ ಪ್ರತಿಮೆಗಳ ನಿರ್ಮಾಣ ಸ್ವಾಗತಾರ್ಹ. ಆದರೆ ಅವುಗಳ ಪೂಜೆ ಸರಿಯೆ ? ಲಿಂಗಾಯತ ಧರ್ಮ ಸ್ಥಾವರವನ್ನು ವಿರೋಧಿಸಿರುವುದಿಲ್ಲವೆ ? ಗುರುಗಳೇ ? ಮತ್ತು ಕೂಡಲ ಸಂಗಮದಲ್ಲಿಯೂ ಸಹ ಗಣಲಿಂಗ ಪೂಜೆ ಮಾಡಿ ಅಲ್ಲಿಯೂ ತೀರ್ಥ ಪ್ರಸಾದ ಕೊಡುತ್ತಾರೆ. ಧ್ಯಾನ ಮಂಟಪದಲ್ಲಿಯೂ ಹಾಗೇ ತೀರ್ಥ ಪ್ರಸಾದ ಕೊಡುತ್ತಾರೆ. ಇದು ತಮ್ಮ ಗಮನಕ್ಕೆ ಬಂದಿರದೆ ಇರಬಹುದೆಂದುಕೊಂಡಿದ್ದೇನೆ.

ಇನ್ನೊಂದು ವಿಚಾರವೆಂದರೆ ತಿರುಪತಿ, ಧರ್ಮಸ್ಥಳಗಳಿಗೆ ಪ್ರವಾಸ ಹೋದವರು ಅಲ್ಲಿಯೂ ಪ್ರಸಾದ ಎಂದು ತರುವ ಹಾಗೆ ಶರಣ ಮೇಳ, ಕಲ್ಯಾಣ ಪರ್ವಕ್ಕೆ ಹೋದವರು ತಮ್ಮ ಊರಿಗೆ ಬಸವ ಪ್ರಸಾದವನ್ನು ಕೊಂಡು ಹೋಗಿ ಎಂದು ಅನೌನ್ಸ್ ಮಾಡುತ್ತಾರೆ. ಇದರ ಅಗತ್ಯವಿದೆಯಾ ಗುರುಗಳೆ ? ಮಾತಾಜಿಯವರ ಮತ್ತು ಎಲ್ಲಾ ಶರಣರ ಅಮೃತ ಪ್ರಸಾದ ವಾಣಿಯನ್ನು ಕೊಂಡು ಹೋದರೆ ಸಾಲದೆ ಪೂಜ್ಯರೆ ? ನಾನು ಹೀಗೆ ಕೇಳಿದೆನೆಂದು ತಪ್ಪು ತಿಳಿಯಬೇಡಿ. ನಾನು ಪರಮಪೂಜ್ಯ ಮಾತಾಜಿಯವರ ನಿಷ್ಠಾವಂತ ಶಿಷ್ಯೆ. ಸ್ಥಳೀಯವಾಗಿ ನಾವು ಮಾತನಾಡುವಾಗ ಮೂಡಿ ಬರುವ ಪ್ರಶ್ನೆಗಳು ಇವು. ಇವುಗಳಿಗೆ ನಾವು ಉತ್ತರಿಸುವುದು ಹೇಗೆ ? ನಿಮ್ಮ ಮಾತಾಜಿಯವರು ಒಂದು ಕಡೆ ಸ್ಥಾವರವನ್ನು ವಿರೋಧಿಸಿ ಮತ್ತೊಂದು ಕಡೆ ಅವರೇ ಬೇರೆಯವರಂತೆ ಸ್ಥಾವರಕ್ಕೆ ತಮ್ಮ ಮುಗ್ಧ ಭಕ್ತರನ್ನು ಎಳೆಯುತ್ತಿದ್ದಾರೆ. ಹಾಗಿರುವಾಗ ಬೇರೆಯವರು ಸ್ಥಾವರ ಲಿಂಗಗಳನ್ನು ಪೂಜಿಸುವಾಗ ಇವರು ವಿರೋಧಿಸುವುದರಲ್ಲಿ ಏನರ್ಥವಿದೆ ಎಂದು ಕೇಳುತ್ತಾರೆ. ಇದಕ್ಕೆ ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ ಇಂಥ ಪ್ರಶ್ನೆಗಳು ನಮ್ಮ ಸುತ್ತಮುತ್ತಲಿನಲ್ಲಿರುವ ಜನರಿಂದ ಬಂದರೆ ನಾವು ಅವರಿಗೆ ಏನೆಂದು ಉತ್ತರಿಸಬೇಕು. ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥಿಸುತ್ತೇನೆ ಸ್ವಾಮೀಜಿ.

ಸಮಾಧಾನ :– ಬಸವ ಧರ್ಮ, ಲಿಂಗಾಯತ ಧರ್ಮ, ವಚನ ಧರ್ಮ, ಶರಣ ಧರ್ಮದಲ್ಲಿ ಗುರು ಲಿಂಗ ಜಂಗಮ ಪೂಜಿಸಲಿಕ್ಕೆ ಹೇಳಿದ್ದಾರೆ. ನಿತ್ಯ ನಿರಂಜನ ಪರಂಜ್ಯೋತಿ ವಸ್ತು ಜಗ-ಜನ ಉದ್ಧಾರಕ್ಕೆ ತ್ರಿವಿಧ ಸಾಕಾರ ರೂಪವಾಗಿ ಗುರು ಲಿಂಗ ಜಂಗಮ ಸ್ವರೂಪವಾಗಿ ಅವತರಿಸಿದೆ. ಗುರುವೆಂದರೆ ಧರ್ಮಗುರು ಬಸವಣ್ಣನವರು. ಲಿಂಗವೆಂದರೆ ಸೃಷ್ಟಿಕರ್ತನ ಕುರುಹಾದ ಇಷ್ಟಲಿಂಗ. ಜಂಗಮವೆಂದರೆ ಜನನ ಮರಣಗಮನವನ್ನು ಯಾರು ಶೂನ್ಯ ಮಾಡಿಕೊಂಡಿದ್ದಾರೆಯೋ ಅವರು ಈ ಸಾಲಿನಲ್ಲಿ ಬರುವವರು. ಬಸವ ಕಲ್ಯಾಣದ ಗವಿಯಲ್ಲಿ ಬರುವ ಸಪ್ತಗಣಾಧೀಶರು, ಪರಮಪೂಜ್ಯ ಡಾ॥ ಮಾತಾಜಿಯವರು 'ಶರಣಾಲಯ ಗದ್ದುಗೆ' ಎಂಬ ಗ್ರಂಥವನ್ನು ರಚಿಸಿದ್ದಾರೆ – ಅದನ್ನು ಬಿಡಿರಿ. ಪಂಚಾಮೃತ ಅಭಿಷೇಕ ಮಾಡಿ, ಪೂಜೆಗೈದು ಸ್ಥಾವರಲಿಂಗ ಪೂಜೆ ಮತ್ತು ಮೂರ್ತಿಗಳ ತೀರ್ಥ ಪ್ರಸಾದ ತೆಗೆದುಕೊಳ್ಳುವುದು ನಿಷಿದ್ಧ. ಆದರೆ ನಾವು ಆ ರೀತಿಯಾಗಿ ಮಾಡುವವರಲ್ಲ. ಬೆರಳುಗಳಿಗೆ ವಿಭೂತಿ ಧರಿಸಿ, ಓಂ ಶ್ರೀ ಗುರು ಬಸವಲಿಂಗಾಯ ನಮಃ ಎಂದು ಮಂತ್ರ ಪಠಿಸಿ ಮಂತ್ರೋದಕ ಮಾಡಿ ಜೊತೆಗೆ ಕಲ್ಲು ಸಕ್ಕರೆ ಪ್ರಸಾದ ಕೊಡುವ ಸತ್ಸಂಪ್ರದಾಯವಿದೆ. ಶರಣರ ಪ್ರತಿಮೆಗಳ ನಿರ್ಮಾಣ ಮಾಡಿದಾಗ, 12ನೇ ಶತಮಾನದಲ್ಲಿ ಅವರು ಮಾಡಿದ ಅದ್ಭುತ ಕಾರ್ಯ ಮತ್ತು ವ್ಯಕ್ತಿತ್ವದ ಪರಿಚಯವಾಗುತ್ತದೆ. ಮುಂಬರುವ, ಈಗಿರುವ ಮಕ್ಕಳಿಗೆ, ಯುವಕರಿಗೆ ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಾಯಕವಾಗುವುದು.

ಕೂಡಲಸಂಗಮದಲ್ಲಿ ಪರಮಪೂಜ್ಯ ಡಾ॥ ಮಾತಾಜಿಯವರು ಗಣಲಿಂಗವನ್ನು ಸ್ಥಾಪಿಸಿ ಏಕಲಿಂಗ-ಏಕಗುರು ಉಪಾಸನೆಯ ಪ್ರತಿಜ್ಞೆಯನ್ನು ಕೈಗೊಳ್ಳಲು ಸಾಕ್ಷಿಯಾಗುವಂತೆ ಮಾಡಿದ್ದಾರೆ. ಮುಸ್ಲಿಂ ಬಾಂಧವರು ಹಜ್ ಯಾತ್ರೆಗೆ ಹೋಗಿ ಕಾಬಾ ದರ್ಶನ ಪಡೆದು ತಮ್ಮ ಧಾರ್ಮಿಕ ಅನುಯಾಯಿತ್ವವನ್ನು ಸ್ವೀಕರಿಸಿಕೊಳ್ಳುವರು. ಅದರಂತೆ ಈ ಗಣಲಿಂಗ ದರ್ಶನವೂ ಸಹಿತ ಲಿಂಗಾಯತ ಧರ್ಮೀಯರಿಗೆ ಅನುಯಾಯಿತ್ವವನ್ನು ಸ್ವೀಕರಿಸಿಕೊಳ್ಳಲು ಸಾಕ್ಷಿಭೂತವಾಗಿದೆ. ಇದರ ಪೂಜೆಯಾದರೂ ಅಷ್ಟೆ! ಪೂರ್ತಿ (ಸ್ನಾನ) ತೊಳೆದು ಪೂಜೆ ಮಾಡಿ ಅದರ ತೀರ್ಥ ಪ್ರಸಾದ ಕೊಡುವುದಿಲ್ಲ. ಇದೀಗ ಹೇಳಿದ ಹಾಗೆ ಒಂದು ಪೂಜಾ ಲೋಟದಲ್ಲಿ ಅಥವಾ ತಂಬಿಗೆಯಲ್ಲಿ ವಿಭೂತಿಯಿಂದ ಮಂತ್ರ ಸಹಿತ ಶುದ್ಧೀಕರಿಸಿದ ಕರುಣೋದಕವಿರುತ್ತದೆ. ಪುರೋಹಿತರು ಮಾಡುವುದು ಷೋಡಶೋಪಚಾರವಲ್ಲ. ಅವರಷ್ಟೆ ಪೂಜೆ ಮಾಡಿ, ಮಾಡಿಸಿದವರಿಗೆ ತೀರ್ಥ ಪ್ರಸಾದ ಕೊಡುವರು. ಇಲ್ಲಿ ಹಾಗಿಲ್ಲ (ಬಸವ ಧರ್ಮ ಪೀಠದಲ್ಲಿ). ಶುಚಿರ್ಭೂತರಾಗಿ ಯಾರು ಬೇಕಾದರೂ ಪೂಜೆ ಸಲ್ಲಿಸಬಹುದು. ಧ್ಯಾನ ಮಂಟಪದಲ್ಲಿಯೂ ಸಹ ಇದೇ ಮಾದರಿಯಾಗಿ ನಡೆಯುತ್ತಿರುತ್ತದೆ. ಅನುಮಾನ ಬೇಡ.

ತಿರುಪತಿ, ಧರ್ಮಸ್ಥಳ ಇನ್ನಾವುದೋ ಕ್ಷೇತ್ರದಲ್ಲಿ ಲಾಡು ಪ್ರಸಾದವನ್ನು ತರುವರು-ಕೊಡುವರು ಇದೊಂದು ರೀತಿಯ ಭಕ್ತಿಭಾವವನ್ನು ಹುಟ್ಟಿಸುವಂಥಹದು. ಕೆಲವರು ಅಲ್ಲಿ ಬಾರದೇ ಇದ್ದವರಿಗೆ ಆ ಲಾಡು ಪ್ರಸಾದವನ್ನು ಕೊಟ್ಟಾಗ ನಮಗೂ ಅಲ್ಲಿಯ ಪ್ರಸಾದ ಸಿಕ್ಕಿತಲ್ಲಾ ಎಂಬ ಸಂತೃಪ್ತಿಯ ಸೂಚನೆ. ಪೂಜ್ಯ ಮಾತಾಜಿಯವರಾಗಲಿ, ಸಾಧಕರಾಗಲಿ ಅನೌನ್ಸ್ ಮಾಡುತ್ತಿರುತ್ತಾರೆ. ಶರಣ ಮೇಳ, ಕಲ್ಯಾಣ ಪರ್ವ, ಲಿಂಗಾಯತ ಗಣ ಮೇಳ ಅಥವಾ ಇನ್ನಿತರ ಯಾವುದೇ ನಮ್ಮ ಬಸವ ಧರ್ಮ ಪೀಠದ ಸಮಾರಂಭಗಳು ಜರುಗಿದಾಗ ಈ ಪ್ರಸಾದದ ಮೂಲಕವಾದರೂ ಬಾರದೇ ಇದ್ದವರಿಗೆ ಪ್ರಸಾದ ಮತ್ತು ಜ್ಞಾನ ಪ್ರಸಾದದ ಹೊಸ ಹೊಸ ಗ್ರಂಥಗಳು, ವಚನ ಗೀತೆಯ, ಪ್ರವಚನದ ಕ್ಯಾಸೆಟ್‌ಗಳು ಹಾಗೂ ಇನ್ನಿತರ ಸಾಮಾನುಗಳು ಮುಟ್ಟಲೆನ್ನುವ (ತಲುಪಲಿ ಎನ್ನುವ) ಭಾವ.

'ಉಳ್ಳವರು ಶಿವಾಲಯವ ಮಾಡುವರಯ್ಯಾ' ಎಂಬುದರ ಅರ್ಥವನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕು. ನಮ್ಮ ಧರ್ಮದ ವೈಶಿಷ್ಟ್ಯವೇನೆಂದರೆ **Moving temple – Talking God** ತಯಾರಿಸುವುದು. 770 ಜನ ಅಮರಗಣಂಗಳು ಈ ತತ್ವ ಪರಿಪಾಲಕರಾಗಿದ್ದರು. ಅವರೆಲ್ಲರ ಆದರ್ಶವನ್ನು ನಾವುಗಳೆಲ್ಲರೂ ಅನುಸರಿಸೋಣ. ನೀವು ಕೇಳಿದ ಪ್ರಶ್ನೆ ತರ್ಕ ಬದ್ಧ, ಸೂಕ್ತವಾಗಿದೆ, ಸೂಕ್ಷ್ಮವಾಗಿವೆ. ಅದರಲ್ಲೇನೂ ಅಭ್ಯಂತರವಿಲ್ಲ.

===

ಪುಟಾಣಿ ಪ್ರಪಂಚ

'ನವಿಲಿನ ಪ್ರತ್ಯುಪಕಾರ



ಒಂದು ಊರಿನಲ್ಲಿ ಸುರೇಶ ಸುಧಾ ಎಂಬ ದಂಪತಿ ಇದ್ದರು. ಅವರಿಗೆ ಒಂದು ಸುಂದರವಾದ ತೋಟವಿತ್ತು. ಆ ತೋಟದಲ್ಲಿ ಅವರು ಮನೆ ಕಟ್ಟಿಕೊಂಡು ವಾಸವಾಗಿದ್ದರು. ಅವರಿಗೆ ಒಂದು ಮುದ್ದಾದ ಮಗು ಇದ್ದಳು ಅವಳ ಹೆಸರು ಸವಿತಾ. ದಂಪತಿಗಳು ಮನೆಯಲ್ಲಿ ನಾಯಿ, ಬೆಕ್ಕು, ಕುರಿ, ಕೋಳಿ, ಆಕಳು, ಎಮ್ಮೆ ಇನ್ನಿತರೆ ಸಾಕು ಪ್ರಾಣಿಗಳನ್ನು ಸಾಕಿದ್ದರು. ಇದರಿಂದಾಗಿ ಸವಿತಾಗೆ ಪ್ರಾಣಿ ಪಕ್ಷಿಗಳನ್ನು ಕಂಡರೆ ತುಂಬಾ ಪ್ರೀತಿ. ಒಂದು ದಿನ ನವಿಲೊಂದು ಯಾವುದೋ ಒಂದು ಕಾಡಿನ ಬೇಟೆಗಾರನಿಂದ ತಪ್ಪಿಸಿಕೊಂಡು ಮೈಮೇಲೆ ರಕ್ತ ಹರಿಸಿಕೊಂಡು ನಡುಗುತ್ತಾ ರಸ್ತೆಯ ಪಕ್ಕದಲ್ಲಿ ನಿಂತಿತ್ತು. ಸವಿತಾ ಶಾಲೆಯಿಂದ ಮನೆಗೆ ಮರಳುತ್ತಿರುವಾಗ ನೋಡಿದಳು. ಆಗ ಅದರ ಮೇಲೆ ಕರುಣೆ ಉಂಟಾಗಿ ಅದನ್ನು ಹಿಡಿದುಕೊಂಡು ತನ್ನ ಮನೆಗೆ ತಂದಳು. ಸುಧಾ ಅದನ್ನು ನೋಡಿ ಔಷಧಿ ಹಚ್ಚಿದಳು. ಸಾಯಂಕಾಲ ಅದಕ್ಕೆ ತಿನ್ನಲು ತುಪ್ಪದ ಅನ್ನ ಕೊಟ್ಟಳು. ಅದನ್ನು ತಿಂದ ನವಿಲು ಆ ರಾತ್ರಿ ವಿಶ್ರಾಂತಿ ಪಡೆಯಿತು. ಒಂದೆರಡು ದಿನ ಮನೆಯಲ್ಲಿ ಇಟ್ಟುಕೊಂಡು. ಗಾಯ ಚೇತರಿಸಿಕೊಂಡ ಮೇಲೆ ಅದನ್ನು ಎತ್ತಿಕೊಂಡು ಹೋಗಿ ನವಿಲಿನ ಗುಂಪಿನಲ್ಲಿ ಸವಿತಾ ಬಿಟ್ಟು ಬಂದಳು. ಆಗ ಆ ನವಿಲು ಬಹಳ ಹೊತ್ತು ಪ್ರೀತಿಯಿಂದ ಪುಟ್ಟಿಯನ್ನೇ ನೋಡುತ್ತಿತ್ತು. ಕೆಲವು ದಿನಗಳ ನಂತರ ಎಂದಿನಂತೆ ಶಾಲೆಗೆ ಹೋಗುತ್ತಿದ್ದ ಸವಿತಾ ಅಂದು ಹಾವೊಂದನ್ನು ಕಾಣದೆ ತುಳಿದುಬಿಟ್ಟಳು. ನಂತರ ಹೆದರಿಕೆಯಿಂದ ಓಡತೊಡಗಿದಳು. ಹಾವು ಸಹ ಅವಳನ್ನು ಹಿಂಬಾಲಿಸ ತೊಡಗಿತು. ಅದೇ ಸಮಯಕ್ಕೆ ಇವಳಿಂದ ಉಪಕಾರ ಪಡೆದ ನವಿಲು ಇದನ್ನು ನೋಡಿ, ತನ್ನನ್ನು ಕಾಪಾಡಿದ ಸವಿತಾಗೆ ಇಂತಹ ಸಂಕಟವೂ ಬಂದಿದೆ. ಅವರ ಉಪಕಾರಕ್ಕೆ ಪ್ರತ್ಯುಪಕಾರ ಮಾಡಬೇಕು ಎಂದು ಓಡುತ್ತಾ ಅಲ್ಲಿಗೆ ಬಂದಿತು. ಆ ಹಾವಿನ ಕಣ್ಣುಗಳನ್ನು ಕೊಕ್ಕಿನಿಂದ ಕುಕ್ಕಿತು. ಹಾವು ಓಡಿಹೋಯಿತು. ಸವಿತಾ ನವಿಲನ್ನು ಅಪ್ಪಿಕೊಂಡು ಮುದ್ದಾಡಿದಳು. ನಂತರ ನವಿಲು ಹಾರಿ ಹೋಗಿ ತನ್ನ ಬಳಗವನ್ನು ಸೇರಿಕೊಂಡಿತು.

ನೀತಿ: ಉಪಕಾರ ಮಾಡಿದವರಿಗೆ ಪ್ರತ್ಯುಪಕಾರ ಮಾಡಬೇಕು. ಮನುಷ್ಯರಾದ ನಾವು ಒಬ್ಬರು ಮಾಡಿದ ಉಪಕಾರವನ್ನು ಬೇಗ ಮರೆತುಬಿಡುತ್ತೇವೆ. ಆದರೆ ಮೂಕ ಪ್ರಾಣಿ-ಪಕ್ಷಿಗಳು ನಾವು ಮಾಡಿದ ಉಪಕಾರವನ್ನು ನೆನಪಿನಲ್ಲಿಟ್ಟುಕೊಂಡು ನಮಗೆ ಪ್ರತ್ಯುಪಕಾರವಾಗಿ ನಮಗೆ ಸಹಾಯ ಮಾಡುತ್ತವೆ.

ಶೂನ್ಯ ಸಂಪಾದನೆಯ ಅರ್ಥ

– ಪೂಜ್ಯ ಶ್ರೀ ಬಸವಪ್ರಭು ಸ್ವಾಮೀಜಿ

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ 'ಶೂನ್ಯ ಸಂಪಾದನೆ'ಗೆ ಒಂದು ಅನನ್ಯ ಇತಿಹಾಸವಿದೆ. ಈ ಕೃತಿಯಲ್ಲಿ ಸಂಗ್ರಹಗೊಂಡ ವಚನಗಳ ಆಧ್ಯಾತ್ಮಿಕ ಸತ್ವ ಮತ್ತು ಅವುಗಳ ಅಭಿವ್ಯಕ್ತಿಯನ್ನು ನಾವು ಅವ್ಯಾಹತವಾಗಿ ಕಾಣುತ್ತೇವೆ. ಶರಣರು ನುಡಿದಂತೆ ನಡೆದು ತಮ್ಮ ಬದುಕನ್ನು ದೈವೀ ಜೀವನವನ್ನಾಗಿ ಪರಿವರ್ತಿಸಿಕೊಂಡವರು. ಗುರು ಬಸವಣ್ಣನವರ ಸಮಕಾಲಿನರಲ್ಲಿ ಮುಖ್ಯವಾಗಿ ಅಲ್ಲಮಪ್ರಭುದೇವರು, ಜಗನ್ಮಾತೆ ಅಕ್ಕಮಹಾದೇವಿ, ಚೆನ್ನಬಸವಣ್ಣ, ಸಿದ್ದರಾಮೇಶ್ವರರು, ಮಡಿವಾಳ ಮಾಚಿದೇವರು, ವೀರಮಾತೆ ಅಕ್ಕನಾಗಲಾಂಬಿಕೆ ಇವರೆಲ್ಲ ಅದ್ಭುತ ಅನುಭಾವಿಗಳು ಇನ್ನುಳಿದಂತೆ 770 ಅಮರಗಣಂಗಳು ಶ್ರೇಷ್ಠ ಜ್ಞಾನಿಗಳಾಗಿ ಕಂಗೊಳಿಸಿದರು.

ಇವರು ಕಟ್ಟಿಕೊಟ್ಟ ಆಂತರಿಕ ಅನುಭವಗಳು 12ನೇ ಶತಮಾನದ ಅನುಭವ ಮಂಟಪದಲ್ಲಿ ದಿನನಿತ್ಯ ಚರ್ಚೆಯ ಮೂಲಕ ಚಿಂತನ-ಮಂಥನ ನಡೆದು, ಧಾರ್ಮಿಕ ಇತಿಹಾಸದಲ್ಲೊಂದು ಅರ್ಥಪೂರ್ಣ ವಚನಸಾಹಿತ್ಯ ಬೆಳಕಿಗೆ ಬಂತು; ಅವರಾಡಿದ ನುಡಿ ಮುತ್ತುಗಳೇ ವಚನಗಳಾದವು.

ಶರಣರು ನಿರ್ಮಿಸಿಕೊಟ್ಟ ಈ ಅನುಭವ ಮತ್ತು ಅನುಭಾವ ವ್ಯಕ್ತಿ ಮತ್ತು ಸಮಾಜವನ್ನು ಸುಂದರವಾಗಿ ಸುವ್ಯವಸ್ಥಿತವಾಗಿ ನಡೆಸಿಕೊಂಡು ಸಾಗಿತು. ಅಂತೆಯೆ ಕಲ್ಯಾಣ ಕ್ರಾಂತಿಯ ನಂತರ ಹತ್ತು ಹಲವು ದಿಕ್ಕಿಗೆ ಚದುರಿಹೋದ ವಚನ ಸಾಹಿತ್ಯ ಆಯಾ ಕಾಲಕ್ಕೆ ಪುನಶ್ಚೇತನಗೊಂಡ ತನ್ನ ಜೀವಂತಿಕೆಯನ್ನು ಸೂರ್ಯ, ಚಂದ್ರರಿರುವರೆಗೂ ಉಳಿಸಿಕೊಳ್ಳಲು ಬಲ ಪಡೆದುಕೊಂಡಿದೆ. ಕಾಲಕಾಲಕ್ಕೆ ಒಡಮೂಡಿದ ಈ ಜಾಗೃತಿ ಸು.15ನೇ ಶತಮಾನದಲ್ಲಿ ಶಿವಗಣ ಪ್ರಸಾದಿ ಮಹಾದೇವಯ್ಯನ ಮೇಲೂ ಪ್ರಭಾವ ಬೀರಿ ಗುರು ಬಸವಾದಿಶರಣರ ವಚನಗಳಿಗೆ ಪ್ರತ್ಯಕ್ಷವಾಗಿ ವಿವರಣೆಗಳನ್ನು ನೀಡುವುದು ಅವಶ್ಯಕವೆಂದು ಸಂಕಲ್ಪಿಸಿ, ಅಲ್ಲಮಪ್ರಭುವನ್ನು ಅನುಭವ ಮಂಟಪದ ಪೀಠಾಧಿಪತಿಯನ್ನಾಗಿಸಿ ಇದೆಲ್ಲದಕ್ಕೆ ಸೂತ್ರದಾರ ಮೂಲಕರ್ತೃ ವಿಶ್ವಗುರು ಬಸವಣ್ಣನವರ ವ್ಯಕ್ತಿತ್ವವನ್ನು ಹೇಳುತ್ತಾ "ಶೂನ್ಯ ಸಂಪಾದನೆ" ಎಂಬ ಮಹತ್ವಪೂರ್ಣ ಗ್ರಂಥವನ್ನು ಹೊರತಂದರು. ಶೂನ್ಯ ಸಂಪಾದನೆಯಲ್ಲಿ ಶೂನ್ಯ ಎಂಬ ಪದವು ಒಟ್ಟಾರೆ ಶರಣರ ಸಿದ್ಧಾಂತಕ್ಕೆ ಹೋಲುವ ರೀತಿಯಲ್ಲಿ ನಾಮಾಂಕಿತಗೊಳಿಸಿದ್ದು ಶಿವಗಣ ಪ್ರಸಾದಿ ಮಹಾದೇವಯ್ಯನವರ ಅದ್ಭುತ ಜ್ಞಾನಾನುಭವದಿಂದ ಎಂಬುದು ಮರೆಯುವಂತಿಲ್ಲ. ಶೂನ್ಯ ಸಂಪಾದನೆಯ ಅರ್ಥವ್ಯಾಪ್ತಿಯು ವಿಶಾಲತೆಯಿಂದ ಕೂಡಿದ್ದು ಅನಭವ ವೇದ್ಯವಾಗಿದೆ.

ಶೂನ್ಯ ಸಂಪಾದನೆ ಎಂದರೆ ದಿವ್ಯಗುಣವನ್ನು ಸಂಪಾದನೆ ಮಾಡಿಕೊಂಡು ದೇವನೇ ತಾನಾಗುವುದು ಎಂದು ವಿಶ್ಲೇಷಿಸಬಹುದು. ಮನುಷ್ಯ ಜೀವನದ ಪರಮಗುರಿ ಶೂನ್ಯವನ್ನು ಸಂಪಾದಿಸುವುದು. ಶೂನ್ಯ ಎಂದರೆ ಬರಿದಾಗುವುದು ಅಥವಾ ಇಲ್ಲವಾಗುವುದು. ಶೂನ್ಯಪದಕ್ಕೆ ಪರ್ಯಾಯವಾಗಿ ಬಯಲು ಎಂಬ ಅರ್ಥ ವಿಧಿತವಾಗುತ್ತದೆ ಮತ್ತು ಶೂನ್ಯ ಎಂಬುದು ಮಾನ್ಯ ಎನ್ನುವ ಪದಕ್ಕೆ ವಿರುದ್ಧವಾದುದಾಗಿದೆ. ನಾನು ಎಂಬ ಅಹಂಕಾರವನ್ನು ಇಲ್ಲವಾಗದ

ಹೊರತು ಪೂರ್ವ ಶೂನ್ಯ ಸಂಪಾದನೆ ಸಾಧ್ಯವೇ ಇಲ್ಲ ಎಂದು ತೋಂಟದ ಸಿದ್ದಲಿಂಗೇಶ್ವರರು ತಮ್ಮ ವಚನಗಳಲ್ಲಿ ಪ್ರಸ್ತಾಪಿಸುತ್ತಾರೆ.

ಒಳಗೆ ನೋಡಿದರೆ ಒಳಗೆ ಬಯಲು, ಹೊರಗೆ ನೋಡಿದರೆ ಹೊರಗೆ ಬಯಲು
ನೆನದಿಹೆನೆಂದರೆ ಮನ ಬಯಲು, ನೆನಹಿಕೊಂಡಿಹೆನೆಂದರೆ
ನೀನಿಲ್ಲವಾಗಿ ನಾನು ಬಯಲು, ನೀನು ಬಯಲು ನೋಡಾ
ಭಾವಿಸಿಕೊಂಬ ವಸ್ತುವಿಲ್ಲವಾಗಿ ಭಾವ ಬಯಲಾದೆನು ಕಾಣಾ
ಮರಹು ನಷ್ಟವಾಯಿತ್ತಾಗಿ ಅರುಹು ಶೂನ್ಯವಾಯಿತು ನೋಡಾ
ಅರಹು ಶೂನ್ಯವಾದುದೇ ಅಖಂಡ ನಿರಾಳ ನೋಡಾ,
ಮಹಾಲಿಂಗ ಗುರು ಶಿವ ಸಿದ್ದೇಶ್ವರ ಪ್ರಭುವೆ. (ಸವಸ)

ಶೂನ್ಯ ಸಂಪಾದನೆ ಎಂಬುದು ಒಂದು ವಿಶಿಷ್ಟ ಸಮಾಸ ಪದ. ಇದರ ಅರ್ಥ ಸೊನ್ನೆಯನ್ನು ಸಂಪಾದಿಸುವುದು ಎಂದಲ್ಲ, ಶೂನ್ಯವನ್ನು ಅಂದರೆ ಸೃಷ್ಟಿಯ ಮೂಲವಾದ ಬಯಲನ್ನು ಸೃಷ್ಟಿಗೆ ಕಾರಣನಾದ ದೇವನನ್ನು ಸಂಪಾದಿಸುವುದು ಎಂದರ್ಥ. ಶೂನ್ಯವೆಂಬುದಕ್ಕೆ ಶರಣರು ಬಯಲು ಎಂದೂ ಕರೆದಿದ್ದಾರೆ. ಬಯಲು ಎಂದರೆ ಏನೇನೂ ಇಲ್ಲದುದಲ್ಲ, ಎಲ್ಲವನ್ನು ಒಳಗೊಂಡದ್ದು. "ಉಂಡು ಉಪವಾಸ ಬಳಸಿ ಬ್ರಹ್ಮಚಾರಿ" ಎಂಬ ನುಡಿಯಂತೆ ಏನೆಲ್ಲ ಇದ್ದರೂ ಇರುವಿನ ಬಂಧನದಲ್ಲಿ ಸಿಕ್ಕಿಕೊಳ್ಳದೆ, ಇದ್ದು ಇಲ್ಲದಂತೆ ಇರುವ ಸ್ಥಿತಿ. ಅದಕ್ಕೆ ಬಯಲು ಅಥವಾ ಶೂನ್ಯ ಎಂದು ಶರಣರು ಹೇಳಿ ಶಿವಸಂಪಾದನೆ ಅರ್ಥವನ್ನು ಕಲ್ಪಿಸಿದ್ದಾರೆ. ಈ ಶೂನ್ಯ ಪದಕ್ಕೆ ಹಲವಾರು ವಿದ್ವಾಂಸರು ತಮ್ಮದೇ ಆದ ಅಭಿಪ್ರಾಯದಲ್ಲಿ ಅರ್ಥ ತಂದುಕೊಟ್ಟಿದ್ದಾರೆ.

ಶೂನ್ಯ ಎಂದರೆ ಏನು ಅಲ್ಲದ್ದು, ಏನು ಇಲ್ಲದ್ದು, ಆದರೆ ಏನೆಲ್ಲವನ್ನ ಒಳಗೊಂಡಿರುವಂತದ್ದು ಗಣಿತದಲ್ಲಿ ಶೂನ್ಯ '0' ಇದ್ದರೂ ಬೆಲೆಯಿಲ್ಲ. ಅದು ಇಲ್ಲದಿದ್ದರೆ ಗಣಿತವೇ ಇಲ್ಲ ಎನ್ನುವಂತೆ, ಇಲ್ಲಿ ವಿದ್ವಾಂಸರು ಅದನ್ನು ಶಬ್ದದೊಳಗಿನ ನಿಶಬ್ದ. ಭೇದದೊಳಗಿನ ಅಭೇದ ಎಂದಿದ್ದಾರೆ. ಲಿಂಗಾಯತ ಧರ್ಮೀಯರಿಗೆ ಲಿಂಗಾಂಗ ಸಾಮರಸ್ಯ ಅದುವೆ ನಿರಾಕಾರ ದೇವನ ಕೂಡುವ ಕೂಟ. ಅದಕ್ಕೆ ಶೂನ್ಯ ಸಂಪಾದನೆ ಅಥವಾ ಬಯಲುಗಳಿಕೆಯೆ ಅನುಭಾವವಾಗಿದ್ದು, ಭಾರತೀಯ ತತ್ವಶಾಸ್ತ್ರದ ಇತಿಹಾಸದಲ್ಲಿ ನಿಲ್ಲುವ ಅಪೂರ್ವ ತತ್ವ ಲಿಂಗಾಯತ ಧರ್ಮ ತತ್ವಗಳಿಗೆ ಹೊಸ ಅರ್ಥವಂತಿಕೆಯನ್ನು ಇದು ಒದಗಿಸಿದೆ ಎಂದು ಹಲವಾರು ಅನುಭಾವಿಗಳು ಅಭಿಪ್ರಾಯಪಟ್ಟಿದ್ದು ಸಮಂಜಸವಾಗಿದೆ.

ತಾತ್ವಿಕಾರ್ಥದಲ್ಲಿ ಶೂನ್ಯ ಸಂಪಾದನೆಯ ಅಥವಾ ಶೂನ್ಯದ ಅರ್ಥ ತಿಳಿಯಬೇಕಾದರೆ, ಶೂನ್ಯ ಎಂಬುದು ಒಂದು ತಾತ್ವಿಕ ಪದ ಭಾರತಿಯ ದರ್ಶನ ಇತಿಹಾಸದಲ್ಲಿ ಬೆಳ್ಳಿ ಚುಕ್ಕಿಯಂತೆ ಪ್ರಕಾಶಮಾನವಾಗಿರುವುದು. .ಶೂನ್ಯ ಶಬ್ದ .ಕೇವಲ ಸೊನ್ನೆ ಎನ್ನುವ ಅರ್ಥದಲ್ಲಿ ಇಲ್ಲ ಎಂದಾಗಬಹುದು. ಕೆಲವು ಸಲ ಶಾಶ್ವತ ಎಂದೂ ಮತ್ತೆ ಕೆಲವು ವೇಳೆ ಅನಿರ್ವಚನಿಯ ಎಂದೂ ಆಗುವುದು. ಒಂದು ಕಡೆ ಶೂನ್ಯ ಆತ್ಯಂತಿಕ ಅರ್ಥ ವಿಶ್ರಾಂತರ್ಯಾಮಿಯಾದ ಲಿಂಗದೇವ ಎನ್ನುವುದೇ ಆಗಿರುತ್ತದೆ. ಶೂನ್ಯ ಪದದ ಅರ್ಥ ವಿವೇಚನೆ ಮಾಡುತ್ತಾ ಹೋದಂತೆ ಅದರ ಪದದರ್ಥ ಸವಿಸ್ತಾರವಾಗಿ ಗೋಚರವಾಗುತ್ತದೆ. ಉದಾಹರಣೆಯ ಮೂಲಕ ನೋಡುವುದಾದರೆ, ಸಂಗ್ರಹದಿಂದ ಮಾನ್ಯ, ಅಸಂಗ್ರಹದಿಂದ ಶೂನ್ಯ, ಒಂದು

ಗ್ರಂಥಿ ಮತ್ತೊಂದು ನಿರ್‌ಗ್ರಂಥಿ ಶೂನ್ಯಗೊಳ್ಳುವುದರಲ್ಲಿ ಎರಡು ಪ್ರಮಾಣಗಳಿರಲು ಸಾಧ್ಯ. ಸಂಗ್ರಹವೆಂದೆನಿಸಿದ್ದೆಲ್ಲವನ್ನೂ ನೀಗಿ ಕರ್ತೃತ್ವ ಮಾತ್ರವೆನಿಸಿದ ಸಾಕ್ಷಿ ಸ್ಥಿತಿಯನ್ನು ಮುಟ್ಟಿ ನಿಲ್ಲುವುದು ಒಂದು ರೀತಿಯ ಶೂನ್ಯವಾದರೆ, ತನ್ನೆಲ್ಲ ಸಂಗ್ರಹದೊಂದಿಗೆ ತನ್ನ ಕರ್ತೃತ್ವವನ್ನು ಮತ್ತು ಸಾಕ್ಷಿ ಸ್ಥಿತಿಯನ್ನು ನೀಗಿ ಹೆಸರಿಲ್ಲದಂತಾಗುವುದು ಮತ್ತೊಂದು ರೀತಿ. ಒಂದು ಸೋಪಾಧಿಕ ಶೂನ್ಯ ಎಂದೆನಿಸಿದರೆ, ಮತ್ತೊಂದು ಸಾಂಗ ಅಥವಾ ಪರಿಪೂರ್ಣ ಶೂನ್ಯ ನಿರುಪಾಧಿಕ ಎಂದಿನಿಸುತ್ತದೆ. ಈ ರೀತಿಯಾಗಿ ಶೂನ್ಯ ಪದದ ಅರ್ಥವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಬಹುದು. ಸ್ಪಷ್ಟವಾಗಿ ಶೂನ್ಯ ಸಂಪಾದನೆಯ ಅರ್ಥ ಮಹತ್ವತೆ ಮತ್ತು ಅದರ ಗುರಿಯನ್ನು ಶರಣರ ವಚನಗಳಲ್ಲಿ ಈ ರೀತಿ ಕಾಣಬಹುದು.

ನಾ ನೀನೆಂಬ ಅಹಂಕಾರ ತಲೆದೋರಿದಲ್ಲಿ,
ಅಮಟ ಕುಟಿಲ ಕುಹಕವೆಂಬ ಬಿರುಗಾಳಿ ಹುಟ್ಟಿತ್ತು
ಬಿರುಗಾಳಿ ಹುಟ್ಟಲೊಡನೆ ಜ್ಞಾನ ಜ್ಯೋತಿ ಕೆಟ್ಟಿತ್ತು
ಜ್ಞಾನ ಜ್ಯೋತಿ ಕೆಡಲೊಡನೆ ನಾ ಬಲ್ಲೆ ಬಲ್ಲಿದರೆಂಬ
ಅರು ಹಿರಿಯರೆಲ್ಲರೂ ತಾಮಸಕ್ಕೊಳಗಾಗಿ
ಸೀಮೆದಪ್ಪಿ ಕೆಟ್ಟರು ಕಾಣಾ ಗುಹೇಶ್ವರಾ. (ಸವಸ)

ನಾನು ಎಂಬ ಅಹಂಕಾರ ಮನುಷ್ಯರಲ್ಲಿ ಹುಟ್ಟಿತು ಎಂದರೆ, ಅವನ ಹೃದಯದಲ್ಲಿ ಕುಟೀಲ ಎನ್ನುವ ಬಿರುಗಾಳಿ ಹುಟ್ಟುತ್ತದೆ; ಆಗ ಜ್ಞಾನ ಜ್ಯೋತಿ ಕೆಡಬಾರದು. ಎಲ್ಲರೂ ಐಹಿಕ ಸುಖಕ್ಕಾಗಿಯೇ ಕೆಟ್ಟರು ಆದರೆ ಗುಹೇಶ್ವರನೆಂಬ ಲಿಂಗವನ್ನು ನಂಬಿದವರು ಯಾರು ಕೆಟ್ಟಿಲ್ಲ ಎನ್ನುವ ಅರ್ಥವನ್ನು ಈ ವಚನ ನೀಡುತ್ತದೆ. "ದೇಹ ನಿರ್ದೇಹ ಎನ್ನುತಿಪ್ಪರಯ್ಯಾ ದೇಹ ನಿರ್ದೇಹವಪ್ಪ ಮರ್ಮವನರಿಯರು ಅಹಂ ಎಂಬುದೇ ದೇಹ, ದಾಸೋಹಂ ಎಂಬುದೆ ನಿರ್ದೇಹ ನೋಡಾ" ಎಂದು ಚೆನ್ನಬಸವಣ್ಣ ಅಹಂಕಾರ ನಿರಸನದ ಮತಿಯನ್ನು ನಿರೂಪಿಸಿದ್ದಾನೆ. ಎಂದು ವಿಶ್ಲೇಷಣೆ ಮಾಡಿದ ಹೆಚ್.ತಿಪ್ಪೇರುದ್ರ ಸ್ವಾಮಿಯವರ ವ್ಯಾಖ್ಯಾನ ಅರ್ಥಪೂರ್ಣವಾಗಿದೆ.

ಶೂನ್ಯ ಸಂಪಾದನೆಯ ಅರ್ಥವು ಅನುಭವ ವೇದ್ಯವಾಗಿದ್ದು, ಶರಣರ ವಚನದಲ್ಲಿ ಷಟ್‌ಸ್ಥಲದ ಮರ್ಮವನ್ನರಿತು ಅಥವಾ ಸಾಧನೆಯಲ್ಲಿ ತೊಡಗಿಸಿಕೊಂಡ ಸಾಧಕನಿಗೆ, ಸಾಧನೆಯ ಅಂತ್ಯದಲ್ಲಿ ದೊರಕುವ ದೇವನ ಸಾಕ್ಷಾತ್ಕಾರದ ಆ ಅನುಭವವೇ ಶೂನ್ಯ ಸಂಪಾದನೆ ಎನಿಸಿಕೊಂಡಿದೆ. ಲಿಂಗಾಯತ ಧರ್ಮದ ಹನ್ನೊಂದು ಲಕ್ಷಣಗಳಲ್ಲಿ ಬರುವ ಸಾಧನೆಯು ಬಹಳ ಮುಖ್ಯವಾಗಿರುವಂತಹದ್ದು.

ಏನು ಏನೂಯಿಲ್ಲದ ಬಯಲೊಳಗೊಂದು ಬಗೆಗೊಳಗಾದ ಬಣ್ಣ ತಲೆದೋರಿತ್ತು.
ಆ ಬಯಲಿನ ಬಣ್ಣ ಶೃಂಗರಿಸಲು ಬಯಲು ಸ್ವರೂಪುಗೊಂಡಿತ್ತು
ಅಂತಪ್ಪ ಸ್ವರೂಪಿನ ಬೆಡಗು ತಾನೆ ನಮ್ಮ ಗುಹೇಶ್ವರಲಿಂಗದ ಪ್ರಥಮ ಬಿತ್ತಿ
ಘನ ಮಹಿಮ ಶರಣರ ಸಂಗದಿಂದ ಘನಕ್ಕೆ ವೇದ್ಯವಾದ ಬಳಿಕ ಅರಿಯಲಿಲ್ಲ
ಮರೆಯಲಿಲ್ಲ, ಕೂಡಲಿಲ್ಲ, ಅನ್ನಲಿಲ್ಲ ಮನ ಮರೆದಪ್ಪಿ ನರವಯಲಾದ
ಸುಖವ ಶೂನ್ಯ ನಿಶೂನ್ಯವೆಂದು ನುಡಿಯಲುಂಟೇ? ಶಬ್ಧ ಮುಗ್ಧವಾಗಿ

ಎನ್ನ ಅಜಗಣ್ಣ ತಂದೆಯೇ ಬೆರಸಿದ ಬಳಿಕ ಉರಿಯುಂಡ ಕರ್ಪೂರದಂತಾದೆನಯ್ಯಾ

ಹೀಗೆ ಸಾಕ್ಷಾತ್ಕಾರದ ಆ ದಿವ್ಯಾನುಭವವೇ ಶೂನ್ಯ ಸ್ಥಿತಿ. ಅದನ್ನು ಸಂಪಾದಿಸಿದವರು ಅನುಭವ ಪ್ರಪಂಚದ ಕೇಂದ್ರವ್ಯಕ್ತಿ ವ್ಯೋಮಕಾಯಸಿದ್ಧ ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು. ಎಲ್ಲಿಯೋ ಹುಟ್ಟಿ ಕಾಡಿನಲ್ಲಿ ಕಣಿವೆಗಳಲ್ಲಿ ಸಂಚಾರ ಮಾಡುತ್ತಾ ಅನಂತರ ಬಯಲು ಪ್ರದೇಶಗಳಲ್ಲಿ ಶಾಂತವಾಗಿ ಹರಿದು ಅನೇಕ ಪುಣ್ಯಕ್ಷೇತ್ರಗಳನ್ನು ಪಾವನಗೊಳಿಸುತ್ತಾ, ಜೀವ-ಜಂತುಗಳನ್ನೂ ಹೊಲ-ಗದ್ದೆಗಳನ್ನು ತಣಿಸಿ, ಬಳಿಕ ಸಾಗರದಲ್ಲಿ ಲೀನಗೊಳ್ಳುವ ನದಿಯಂತೆ, ಅಲ್ಲಮನ ಬಾಳು ಮೇರು ಪರ್ವತದಂತೆ ಜಗದ್ಭರಿತ ಜಂಗಮನಾಗಿ ಸಂಚರಿಸಿ ಅನೇಕ ಮುಮುಕ್ಷುಗಳ ಹೃನ್ಮನವನ್ನು ತೊಳಗಿ ಬೆಳಗಿದರು. ಮಹಾಗುರು ಬಸವಣ್ಣನವರು ಭಕ್ತಿಯ ಮಹಾಪೂರ ಹರಿಸಿದರೆ, ಅಲ್ಲಮಪ್ರಭುದೇವರು ಜ್ಞಾನಾನುಭವದ ತವನಿಧಿಯೇ ಆಗಿದ್ದರು, ಬಯಲು ಕಾಯ ಮಾಡಿಕೊಂಡು ವ್ಯೋಮಕಾಯವಾಗಿದ್ದರು. ಅಂತೆಯೇ ಶೂನ್ಯ ಸಿದ್ಧಾಂತ ಕೇಂದ್ರಬಿಂದು ಅಲ್ಲಮನನ್ನು ಶೂನ್ಯ ಪೀಠದ ಚಕ್ರವರ್ತಿ ಎಂದು ಸ್ತುತಿಸಿ, ಶೂನ್ಯ ಸಂಪಾದನೆಯನ್ನು ನಿರ್ಮಿಸಿಕೊಟ್ಟ ಕೀರ್ತಿ ಶಿವಗಣ ಪ್ರಸಾದಿ ಮಹಾದೇವಯ್ಯನವರಿಗೆ ಸಲ್ಲುತ್ತದೆ.

ಶೂನ್ಯ ಸಂಪಾದನೆಯು ಒಂದು ಆಧ್ಯಾತ್ಮಿಕ ಅನುಭವವನ್ನು ನೀಡುವ ಗ್ರಂಥವಾಗಿದೆ. ಕಾರಣ ಮುಸ್ಲಿಂರಿಗೆ ಕುರಾನ್, ಕ್ರೈಸ್ತರಿಗೆ ಬೈಬಲ್, ಸಿಖ್‌ರಿಗೆ ಗ್ರಂಥ ಸಾಹೇಬ್, ಹೇಗೋ ಲಿಂಗಾಯತ ಧರ್ಮೀಯರಿಗೆ ಶೂನ್ಯ ಸಂಪಾದನೆ ವಚನ ಸಾಹಿತ್ಯದ ಒಂದು ಭಾಗವಾದ ಪವಿತ್ರ ಆಧ್ಯಾತ್ಮಿಕ ಅನುಭವ ಗ್ರಂಥ ಎಂದು ಕರೆಯಬಹುದು. ಒಟ್ಟಾರೆಯಾಗಿ ಶೂನ್ಯ ಸಂಪಾದನೆ ಗ್ರಂಥ ಇದು ಅನುಭವ ಸಾಹಿತ್ಯಕ್ಕೆ ವಿಶಿಷ್ಟವಾದ ಕೊಡುಗೆ ಎಂದು ಹೇಳಿದರೆ, ಅದು ಉತ್ಪ್ರೇಕ್ಷೆಯಾಗಲಾರದು. ಅದು ಲೌಕಿಕವಾದ ದೃಷ್ಟಿಗೆ ಅತ್ಯಂತ ವಿಚಿತ್ರವಾದ ಮತ್ತು ವಿರೋದಾರ್ಥಗಳಿಗೆ ಹೆಸರಾದರೆ, ಧಾರ್ಮಿಕ ದೃಷ್ಠಿಗೆ ಒಂದು ತತ್ವವನ್ನು ಅಚ್ಚುಕಟ್ಟಾಗಿ ಹೇಳುವ ಅತ್ಯುತ್ತಮ ಪಾರಿಭಾಷಿಕ ಪದ. ನಾವು ಗ್ರಂಥ ಸಂಪಾದನೆ ಕೇಳಿದ್ದೇವೆ, ಕೀರ್ತಿ ಸಂಪಾದನೆಯನ್ನು ಕೇಳಿದ್ದೇವೆ ಅಂತಹ ಸಂಪಾದನೆಗಳನ್ನು ನಾವು ಅರ್ಥಮಾಡಿಕೊಳ್ಳಬಲ್ಲೆವು ಆದರೆ ಶೂನ್ಯವನ್ನು ಅರ್ಥೈಸಿಕೊಳ್ಳಲು ಪರಮಜ್ಞಾನ ಬೇಕಾಗುತ್ತದೆ. ಶೂನ್ಯದಲ್ಲಿ ಅದ್ಭುತ ಬ್ರಹ್ಮಾಂಡ ಶಕ್ತಿ ಅಡಗಿ ಕುಳಿತಿದೆ. ಅದು ವಿಸ್ಮಯ ಮತ್ತು ಆಶ್ಚರ್ಯ! ಅನುಭವಿಸಿದವನು ಮಾತ್ರ ಶೂನ್ಯವೆಂಬ ಹಡಗನ್ನೇರಬಲ್ಲ, ಮುಕ್ತಿಯ ಸಾಮ್ರಾಜ್ಯದ ದಡವನ್ನು ಮುಟ್ಟಿ ಯೋಗ್ಯ ಗುರಿಯನ್ನು ತಲುಪಬಲ್ಲ ಎಂಬುದು ಸತ್ಯ ಸಂಗತಿಯಾಗಿದೆ. ಶಿವಗಣ ಪ್ರಸಾದಿ ಮಹಾದೇವಯ್ಯನ ನಂತರ ನಾಲ್ಕು ಜನ ಈ ಕೃತಿಯನ್ನು ಸಂಪಾದಿಸಿದ್ದಾರೆ. ಒಟ್ಟು 5 ಜನ ಈ ಶೂನ್ಯ ಸಂಪಾದನೆ ಗ್ರಂಥವನ್ನು ವಿಸ್ತಾರಗೊಳಿಸುತ್ತಾ ಬಂದಿರುವುದು ಗಮನಾರ್ಹ ಇತ್ತೀಚೆಗೆ ಅದರ ಆಳ ಮತ್ತು ಹರವುಗಳೊಂದಿಗೆ ಇನ್ನು ವಿಸ್ತಾರ ಹೊಂದುತ್ತಿರುವುದು ಶರಣರ ಅನುಭವಲೋಕವನ್ನು ಎತ್ತಿ ಹಿಡಿಯುವುದರ ಸಂಕೇತವಾಗಿದೆ.

==

ಓದುಗರಿಗೆ ವಿಶೇಷ ಸೂಚನೆ

ನೀವು ಉತ್ತಮ ಚಿಂತಕರು ಹಾಗೂ ಲೇಖಕರಾಗಿದ್ದರೆ ವಿಶೇಷ ಲೇಖನಗಳನ್ನು ಡಿಟಿಪಿ ಮಾಡಿ **basavakumaraswamiji@gmail.com** ಮೇಲ್ ಗೆ ಕಳುಹಿಸಿ

ಓಂ ಶ್ರೀ ಗುರು ಬಸವ ಲಿಂಗಾಯ ನಮ:

866666

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ 2017 ರ ಜನವರಿ 11, 12, 13, 14, 15ರಂದು ನಡೆಯಲಿರುವ 30ನೆಯ ಶರಣಮೇಳದ ಅಂಗವಾಗಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ

ಪ್ರಚಾರ ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2016ನೆಯ ಇಸವಿಯ ದಿ.11ರಿಂದ 15ರವರೆಗೆ ನಡೆಯುವ 29ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾ ಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾ ಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸಲೂಬಹುದು. 2016ನೆಯ ಇಸವಿಯ 29ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು
10-10-2015

ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ

ವಿ.ಸೂ: ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.ಸ್ಥಳೀಯ ಕಾರಣದಿಂದ ಬದಲಾವಣೆ ಬೇಕಾಗಿದರೆ ತಕ್ಷಣವೇ ತಿಳಿಸಿರಿ.

ಸಂಪರ್ಕಿಸುವ ದೂರವಾಣಿ:

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ – 9448113920
ಪೂಜ್ಯ ಶ್ರೀ ಸದ್ಗುರು ಮಾತೆ ಬಸವರತ್ನಾದೇವಿ –9481741795

ಕ್ರ.ಸಂ.	ವಾರ	ದಿನಾಂಕ	ಊರಿನ ಹೆಸರು
15.	ಮಂಗಳ(ಬಸವ)ವಾರ	15-11-2016	ದೊಡ್ಡಉಳ್ಳಾರ್ತಿ
16.	ಬುಧ (ಚನ್ನ)ವಾರ	16-11-2016	ದಾಸರ್ಲೆಹಳ್ಳಿ
17.	ಗುರು (ಪ್ರಭು)ವಾರ	17-11-2016	ಕೆ.ಡಿ ಕೋಟೆ
18.	ಶುಕ್ರ(ಮಾತೃ)ವಾರ	18-11-2016	ಚಿತ್ರನಾಯಕನಹಳ್ಳಿ
19.	ಶನ(ಶರಣ)ವಾರ	19-11-2016	ಘಟಪರ್ತಿ
20.	ಭಾನು(ದೇವ)ವಾರ	20-11-2016	ತಿಮ್ಮಪ್ಪಯ್ಯನಹಳ್ಳಿ
21.	ಸೋಮ(ಶಿವ)ವಾರ	21-11-2016	ಅಂದ್ರಾಳು
22.	ಮಂಗಳ(ಬಸವ)ವಾರ	22-11-2016	ಬಳ್ಳಾರಿ
23.	ಬುಧ (ಚನ್ನ)ವಾರ	23-11-2016	ಬಳ್ಳಾರಿ
24.	ಗುರು (ಪ್ರಭು)ವಾರ	24-11-2016	ಸಿರುಗುಪ್ಪ
25.	ಶುಕ್ರ(ಮಾತೃ)ವಾರ	25-11-2016	ಗಂಗಾವತಿ
26.	ಶನಿ(ಶರಣ)ವಾರ	26-11-2016	ಕೊಪ್ಪಳ
27.	ಭಾನು(ದೇವ)ವಾರ	27-11-2016	ಕೊಪ್ಪಳ
28.	ಸೋಮ (ಶಿವ)ವಾರ	28-11-2016	ಶರಣಗ್ರಾಮ ಗುಳೇ
29.	ಮಂಗಳ(ಬಸವ)ವಾರ	29-11-2016	ಕುಸುಗಲ್
30.	ಬುಧ (ಚನ್ನ)ವಾರ	30-11-2016	ಹುಬ್ಬಳ್ಳಿ
31.	ಗುರು (ಪ್ರಭು)ವಾರ	01-12-2016	ಮುಮ್ಮಿಗಟ್ಟಿ
32.	ಶುಕ್ರ(ಮಾತೃ)ವಾರ	02-12-2016	ಕಿತ್ತೂರು ಸುತ್ತಮುತ್ತ
33.	ಶನಿ(ಶರಣ)ವಾರ	03-12-2016	ಕಿತ್ತೂರು ಸುತ್ತಮುತ್ತ
34.	ಭಾನು(ದೇವ)ವಾರ	04-12-2016	ಕಿತ್ತೂರು ಸುತ್ತಮುತ್ತ
35.	ಸೋಮ (ಶಿವ)ವಾರ	05-12-2016	ಧಾರವಾಡ
36.	ಮಂಗಳ(ಬಸವ)ವಾರ	06-12-2016	ವಕ್ಕುಂದ
37.	ಬುಧ (ಚನ್ನ)ವಾರ	07-12-2016	ಬೈಲಹೊಂಗಲ
38.	ಗುರು (ಪ್ರಭು)ವಾರ	08-12-2016	ಬೈಲಹೊಂಗಲ
39.	ಶುಕ್ರ(ಮಾತೃ)ವಾರ	09-12-2016	ಬೆಳಗಾಂ
40.	ಶನಿ(ಶರಣ)ವಾರ	10-12-2016	ಬೆಳಗಾಂ
41.	ಭಾನು(ದೇವ)ವಾರ	11-12-2016	ಸಂಕೇಶ್ವರ
42.	ಸೋಮ (ಶಿವ)ವಾರ	12-12-2016	ಗಡಿಹಿಂಗ್ಲಾಜ್
43.	ಮಂಗಳ(ಬಸವ)ವಾರ	13-12-2016	ಗೋಕಾಕ್
44.	ಬುಧ (ಚನ್ನ)ವಾರ	14-12-2016	ಗೋಕಾಕ್
45.	ಗುರು (ಪ್ರಭು)ವಾರ	15-12-2016	ಗೋಕಾಕ್

46.	ಶುಕ್ರ(ಮಾತೃ)ವಾರ	16-12-2016	ಗೋಕಾಕ್
47.	ಶನಿ(ಶರಣ)ವಾರ	17-12-2016	ಶೇಗುಣಸಿ
48.	ಭಾನು(ದೇವ)ವಾರ	18-12-2016	ಖವಟಕೊಪ್ಪ
49.	ಸೋಮ (ಶಿವ)ವಾರ	19-12-2016	ತಾಂವಶಿ
50.	ಮಂಗಳ(ಬಸವ)ವಾರ	20-12-2016	ಅಥಣಿ
51.	ಬುಧ (ಚನ್ನ)ವಾರ	21-12-2016	ಕನಮಡಿ
52.	ಗುರು (ಪ್ರಭು)ವಾರ	22-12-2016	ಚಡಚಣ
53.	ಶುಕ್ರ(ಮಾತೃ)ವಾರ	23-12-2016	ಬಿಜಾಪುರ
54.	ಶನಿ(ಶರಣ)ವಾರ	24-12-2016	ಮಾರ್ಕಬ್ಬಿನಹಳ್ಳಿ
55.	ಭಾನು(ದೇವ)ವಾರ	25-12-2016	ಗುಲಬರ್ಗಾ(ನೃಪತುಂಗನಗರ)
56.	ಸೋಮ (ಶಿವ)ವಾರ	26-12-2016	ಗುಲಬರ್ಗಾ(ಮಹಾಂತೇಶ)
57.	ಮಂಗಳ(ಬಸವ)ವಾರ	27-12-2016	ಯಲಮಾಮಿಡಿ
58.	ಬುಧ (ಚನ್ನ)ವಾರ	28-12-2016	ಉದಗೀರ್
59.	ಗುರು (ಪ್ರಭು)ವಾರ	29-12-2016	ಕಮಲನಗರ
60.	ಶುಕ್ರ(ಮಾತೃ)ವಾರ	30-12-2016	ಬೀದರ್
61.	ಶನಿ(ಶರಣ)ವಾರ	31-12-2016	ಜಹೀರಾಬಾದ್
62.	ಭಾನು(ದೇವ)ವಾರ	01-01-2017	ಹೈದ್ರಾಬಾದ್
63.	ಸೋಮ (ಶಿವ)ವಾರ	02-01-2017	ಹೈದ್ರಾಬಾದ್
64.	ಮಂಗಳ(ಬಸವ)ವಾರ	03-01-2017	ಹೈದ್ರಾಬಾದ್
65.	ಬುಧ (ಚನ್ನ)ವಾರ	04-01-2017	ಹೈದ್ರಾಬಾದ್
66	ಗುರು(ಪ್ರಭು)ವಾರ	05-01-2017	ಹೈದ್ರಾಬಾದ್
67.	ಶುಕ್ರ(ಮಾತೃ)ವಾರ	06-01-2017	ಹೈದ್ರಾಬಾದ್
68.	ಶನಿ(ಶರಣ)ವಾರ	07-01-2017	ಹೈದ್ರಾಬಾದ್
69.	ಭಾನು(ದೇವ)ವಾರ	08-01-2017	ಹೈದ್ರಾಬಾದ್
70.	ಸೋಮ (ಶಿವ)ವಾರ	09-01-2017	ಹೈದ್ರಾಬಾದ್
71.	ಮಂಗಳ(ಬಸವ)ವಾರ	10-01-2017	ಕೂಡಲ ಸಂಗಮಕ್ಕೆ ಪ್ರಯಾಣ

ಕಲ್ಯಾಣ ಕಿರಣ ಓದುಗರಿಗೆ ಸೂಚನೆ

ಚಂದಾ ಅವಧಿ ಮುಗಿದವರಿಗೆ ಸೂಚನೆ ಕಳಿಸಲಾಗುವುದು. ತಕ್ಷಣ ಹಣ ಕಳಿಸಿರಿ, ನವೀಕರಿಸಿರಿ. ನಿಮ್ಮ ಮೊಬೈಲ್ ಸಂಖ್ಯೆ ಮರೆಯದೆ ತಿಳಿಸಿರಿ. ವಿ.ಸೂ: ಚಂದಾ ಕಳಿಸಲು ಅನುಕೂಲ ಇಲ್ಲದವರು ಫೋನ್ ಮೂಲಕ ಪತ್ರಿಕೆ ಕಳಿಸಲು ತಿಳಿಸಿರಿ. ಶರಣ ಮೇಳ (ಕಲ್ಯಾಣ ಪರ್ವ)ದಲ್ಲಿ ಚಂದಾ ಹಣವನ್ನು ಪ್ರಾಮಾಣಿಕವಾಗಿ ಕಟ್ಟಿರಿ. ಸಂಪರ್ಕಿಸುವ ದೂರವಾಣಿ: 9945806297

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ಬೆಂಗಳೂರು–ಮೈಸೂರು ಹೆದ್ದಾರಿಯ ಮೇಲಿರುವ ಕುಂಬಳಗೋಡಿನ

ಬಸವ ಗಂಗೋತ್ರಿಯಲ್ಲಿ

111 ಅಡಿ ಎತ್ತರದ ಬಸವ ಪುತ್ಥಳಿ

ವಿಶ್ವಗುರು ಬಸವಣ್ಣನವರು ಜಗತ್ತಿನ ಪ್ರಥಮ ಸಮಾಜವಾದಿ(***Socialist***), ಶ್ರೇಷ್ಠ ಶಿಕ್ಷಣ ತಜ್ಞ(*Educationist*)ರು, ಸಮಾಜ ಸುಧಾರಕ(*Social Reformer*)ರು, ಮಾನವತಾವಾದಿ (*Humanist*) ಗಳು, ಲಿಂಗಾಯತ ಧರ್ಮದ ಸಂಸ್ಥಾಪಕರು. ಅವರ ಬಗ್ಗೆ ಕರ್ನಾಟಕದ ಜನತೆ ಮಾತ್ರವಲ್ಲ ಸಮಸ್ತ ಭಾರತೀಯರು ಮತ್ತು ವಿದೇಶೀಯರು ತಿಳಿದುಕೊಳ್ಳಬೇಕಾದುದು ಅಗತ್ಯವಿದೆ. ಹಿಂದೆ ಬೌದ್ಧ ಧರ್ಮೀಯರ ಧರ್ಮ ಪ್ರಚಾರಕರು ಗೌತಮ ಬುದ್ಧನ ಬೃಹತ್ ಪ್ರತಿಮೆಗಳ ಮೂಲಕ ಬುದ್ಧನ ತನ್ಮೂಲಕ ಬೌದ್ಧ ಧರ್ಮದ ಪ್ರಚಾರ ಮಾಡಿದರು. ನಮಗೂ ಅನುಭವವಾಗಿರುವುದಲ್ಲದೆ 111 ಅಡಿ ಎತ್ತರದ ಬಸವ ಪುತ್ಥಳಿ ನಿರ್ಮಾಣ ಮಾಡಲು ಪ್ರೇರಣೆಯೂ ದೊರೆತಿದೆ. ಧರ್ಮಕ್ಷೇತ್ರ, ಶರಣ ಭೂಮಿ ಬಸವ ಕಲ್ಯಾಣದಲ್ಲಿ ದಿ. 28–10–2012 ರಂದು ಗುರು ಬಸವಣ್ಣನವರ 108 ಅಡಿ ಎತ್ತರದ ಅಭಯ ಹಸ್ತದ ಪುತ್ಥಳಿಯು ಲೋಕಾರ್ಪಣೆ ಗೊಂಡಿತಲ್ಲವೆ? ಈಗ ಜನರು ತಂಡೋಪತಂಡವಾಗಿ ದರ್ಶಿಸಲು ಬರುತ್ತಿದ್ದಾರೆ. ಜಾತಿಮತ ಪಂಥ ಭೇದವಿಲ್ಲದೆ ಮುಸಲೀಮ್, ಕ್ರೈಸ್ತರಾದಿಯಾಗಿ ಎಲ್ಲರೂ ಬರುತ್ತಿದ್ದಾರೆ. ಬಸವ ಕಲ್ಯಾಣವು ಕರ್ನಾಟಕದ ಅಂಚಿನಲ್ಲಿದ್ದು ಮಹಾರಾಷ್ಟ್ರ, ಆಂಧ್ರದ ಗಡಿಗಳಿಗೆ ಹತ್ತಿರದಲ್ಲಿ ಇರುವುದರಿಂದ ಮೂರು ರಾಜ್ಯಗಳ ಜನರು ದಿನ ನಿತ್ಯ ಸಂದರ್ಶಿಸುತ್ತಿದ್ದಾರೆ. ಸಂಜೆ 6.30 ರಿಂದ 2 ತಾಸು ವಿಶೇಷವಾದ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡುವುದರಿಂದ ಪ್ರವಾಸಿಕರು ರಾತ್ರಿಯ ವೇಳೆ ಸಹ ಸಂದರ್ಶನಕ್ಕೆ ಬರುತ್ತಾರೆ. ಇದನ್ನು ಕಂಡಾಗ ನಮ್ಮ ಉದ್ದೇಶ ಸಫಲವಾಯಿತೆಂದು ಸಂತೋಷವೆನಿಸುತ್ತದೆ. ಹೀಗೆ ಬೃಹತ್ ಶಿಲ್ಪಗಳು ಬೇಗನೆ ಜನರ ಗಮನವನ್ನು ಸೆಳೆಯುತ್ತವೆಂಬುದು ಪರಮ ಸತ್ಯ.

ಬಸವ ಗಂಗೋತ್ರಿಯಲ್ಲಿ

ಬೆಂಗಳೂರು ಕರ್ನಾಟಕದ ರಾಜಧಾನಿ ಮಾತ್ರವಲ್ಲ ಜಾಗತಿಕವಾಗಿ ಪ್ರಸಿದ್ಧಿಯನ್ನು ಪಡೆದ ನಗರ. ಎಲ್ಲ ಭಾರತೀಯರೂ ಸಮಾವೇಶವಾಗಿರುವ "ಪುಟ್ಟ ಭಾರತ" ಮಾತ್ರವಲ್ಲ ಜಗತ್ತಿನ ಎಲ್ಲ ರಾಷ್ಟ್ರಗಳವರು ಸಂದರ್ಶಿಸುವ ಸ್ಥಳ. ಬೆಂಗಳೂರಿಗೆ ಬಂದವರು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಮೈಸೂರನ್ನು ನೋಡಲು ಹೋಗದೆ ಇರಲಾರದು. ಬೆಂಗಳೂರಿನಿಂದ ಮೈಸೂರು ಹೆದ್ದಾರಿಯ ಮೇಲೆ 20ನೆಯ ಕಿಲೋಮೀಟರ್ ದೂರದಲ್ಲಿ ವಿಶ್ವಕಲ್ಯಾಣ ಮಿಷನ್ ಒಡೆತನದ 'ಬಸವ ಗಂಗೋತ್ರಿ' ಎಂಬ ಆಶ್ರಮವಿದೆ. ಇಲ್ಲಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಹೆಸರಿನ ಜ್ಞಾನಪೀಠವೂ ಸ್ಥಾಪನೆಯಾಗಿ ಇದಕ್ಕೆ ಪೂಜ್ಯ ಶ್ರೀ ಜಗದ್ಗುರು

ಚನ್ನಬಸವಾನಂದ ಸ್ವಾಮಿಗಳು ಪೀಠಾಧಿಪತಿಗಳಾಗಿದ್ದಾರೆ. ಇಲ್ಲಿ ಅನಾಥಾಲಯ ಮತ್ತು ವೃದ್ಧಾಶ್ರಮಗಳು ನಡೆಯುತ್ತಲಿವೆ. ತೆಂಗಿನ ತೋಟದೊಡನೆ ಸುಂದರವಾದ ಪರಿಸರ ಹೊಂದಿರುವ ಬಸವ ಗಂಗೋತ್ರಿಯಲ್ಲಿ ಗುರು ಬಸವಣ್ಣನವರ ಬೃಹತ್ ಪುತ್ಥಳಿ ಆಗಬೇಕೆಂದು ವಿಶ್ವಕಲ್ಯಾಣ ಮಿಷನ್ ಚೇರ್ಮನ್ನರಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅಪೇಕ್ಷಿಸಿದ್ದರು. ಬಸವ ಗಂಗೋತ್ರಿ ಬೆಂಗಳೂರು–ಮೈಸೂರು ಹೆದ್ದಾರಿಯ ಮೇಲೆ ಗಂಗೋತ್ರಿ ಹೆದ್ದಾರಿಯ ಬದಿಗೆ ಇರುವುದರಿಂದ ಪ್ರವಾಸಿಗರ ಗಮನವನ್ನು ಬೇಗನೆ ಸೆಳೆಯುವುದೆಂದು ಎಲ್ಲರ ಅಭಿಪ್ರಾಯ. ಒಂದು ದಿನ ಬೃಹತ್ ಪುತ್ಥಳಿಗೆ ಶಂಕುಸ್ಥಾಪನೆ ಸಹ ಮಾಡಲಾಯಿತು. ಕೆಲಸವನ್ನು ಆರಂಭಿಸಬೇಕು ಎನ್ನುವಷ್ಟರಲ್ಲಿ ನಮ್ಮ ಗಮನ ಬೇರೆಡೆ ಹರಿಯುವಂತಾಯಿತು. ಕೂಡಲ ಸಂಗಮದಲ್ಲಿ ಶ್ರೀ ಸಂಗಮೇಶ್ವರ ದೇವಾಲಯವನ್ನ ಸ್ಥಳಾಂತರಿಸಬೇಕು ಎನ್ನುವ ಸರ್ಕಾರದ ಪ್ರಯತ್ನದ ವಿರುದ್ಧ ಒಂದು ಚಳುವಳಿಯನ್ನು ಹಮ್ಮಿಕೊಳ್ಳಬೇಕಾಗಿ ಬಂದಿತು. ಆ ಹೋರಾಟದಲ್ಲಿ ತೊಡಗಿಸಿ ಕೊಳ್ಳಲು ಕೂಡಲ ಸಂಗಮಕ್ಕೆ ಹೋದಾಗ ಅಲ್ಲಿಯ ದುಃಸ್ಥಿತಿ ಕಂಡು ಕೂಡಲ ಸಂಗಮ ಕ್ಷೇತ್ರ ಅಭಿವೃದ್ಧಿಗಾಗಿ ಒಂದು ಟ್ರಸ್ಟನ್ನು ರಚಿಸಬೇಕಾಯಿತು. ಹೀಗೆ 1987ರಲ್ಲಿ ಬಸವ ಧರ್ಮ ಪೀಠ ಟ್ರಸ್ಟ್ ರೂಪುಗೊಂಡು ಕಾರ್ಯಾರಂಭ ಮಾಡಿತು.

ಬೀದರ್ ಜಿಲ್ಲೆಯ ಬಸವ ಕಲ್ಯಾಣ ಶರಣಭೂಮಿ ; 770 ಅಮರ ಗಣಂಗಳು ನಡೆದಾಡಿದ ಪುಣ್ಯಕ್ಷೇತ್ರ, ಅದರ ಅಭಿವೃದ್ಧಿಯನ್ನು ಮಾಡಬೇಕು ಎಂಬ ಆಂತರಿಕ ಪ್ರೇರಣೆ ಬಂದುದರಿಂದ 2001ನೆಯ ಇಸವಿಯ ಡಿಸೆಂಬರ್ 21 ರಂದು ಬಸವ ಕಲ್ಯಾಣದಲ್ಲಿ ಮುಖ್ಯರಸ್ತೆಗೆ ಹೊಂದಿಕೊಂಡಂತೆ 3 ಎಕರೆ ಜಮೀನು ಖರೀದಿಸಲಾಯಿತು.

ಹಲವಾರು ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯ ಮಾಡಲಾಗುತ್ತಿದೆ. ಬಸವೇಶ್ವರ ಧ್ಯಾನಮಂಟಪ, ಶರಣ ಗ್ರಾಮ, ಹರಳಯ್ಯ ತೀರ್ಥ, ಮಹಾಮನೆ ಮಂಟಪ – ಇವುಗಳ ಜೊತೆಗೆ ಎಲ್ಲಕ್ಕೂ ಕಳಸವಿಟ್ಟಂತೆ ಗುರು ಬಸವಣ್ಣನವರ 108 ಅಡಿ ಪುತ್ಥಳಿಯನ್ನು ನಿರ್ಮಾಣ ಮಾಡಿ ದಿ. 28–10–2012 ರಂದು ಲೋಕಾರ್ಪಣೆ ಮಾಡಲಾಯಿತು. ಕೂಡಲ ಸಂಗಮದಲ್ಲಿ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ 63 ಅಡಿ ಎತ್ತರದ ಮೂರ್ತಿಯ ನಿರ್ಮಾಣ, ಶರಣ ಧಾಮ ವಸತಿ ಗೃಹ ನಿರ್ಮಾಣ ಮುಂತಾದ ಕೆಲಸಗಳು, ಬಸವ ಕಲ್ಯಾಣದಲ್ಲಿ ಶರಣ ಗ್ರಾಮದ ನಿರ್ಮಾಣ, ಶರಣಧಾಮ ವಸತಿ ಗೃಹ ನಿರ್ಮಾಣ, ಪಾಕಶಾಲೆ, ದಾಸೋಹ ಮಂಟಪ ಮುಂತಾದ ಕೆಲಸಗಳು ಆಗುವುದು ಅಗತ್ಯವಿದೆಯಾದರೂ ಬೆಂಗಳೂರಿನ ಶರಣ ಬಂಧುಗಳು ಬಸವ ಗಂಗೋತ್ರಿಯಲ್ಲಿ ಆಗಬೇಕಾದ ಬೃಹತ್ ಪುತ್ಥಳಿಯ ನಿರ್ಮಾಣದ ಬಗ್ಗೆ ಕಾತರಿಸುತ್ತಿದ್ದಾರೆ. ಲಿಂಗೈಕ್ಯ ಪೂಜ್ಯ ಅಪ್ಪಾಜಿಯವರ ಸದಿಚ್ಛೆಯ ಬಗ್ಗೆ ನೆನಪಿಸುತ್ತಿದ್ದಾರೆ. ಹೀಗಾಗಿ 111 ಅಡಿ ಎತ್ತರದ ಬಸವ ಪುತ್ಥಳಿ ಕಾರ್ಯಯೋಜನೆಯನ್ನು ಕೈಗೆ ಎತ್ತಿಕೊಳ್ಳುವ ಸಂಕಲ್ಪ ಮಾಡಲಾಗಿದೆ.

ಮಟ್ಟಸವಾದ ಬಯಲಿನಲ್ಲಿ ಮಾಡಬೇಕಾಗಿರುವುದರಿಂದ 6 ಮೆಟ್ಟಲಿನ 30 ಅಡಿ ಎತ್ತರದ ಪೀಠವನ್ನು ಮಾಡಿ ಅದರ ಮೇಲೆ ಇಷ್ಟಲಿಂಗ ಪೂಜೆ –ತ್ರಾಟಕ ಯೋಗದಲ್ಲಿ ನಿಂತ ಗುರು ಬಸವಣ್ಣನವರನ್ನು ರೂಪಿಸಲಾಗುವುದು. ಪೀಠದ ಕೆಳಭಾಗದಲ್ಲಿ ಒಂದು ಧ್ಯಾನ ಮಂಟಪವನ್ನು ಮತ್ತು ಸಪ್ತ ಗಣಾಧೀಶರ ಮೂರ್ತಿಗಳು ಸಹಿತವಾದ ಶರಣ ಮಂಟಪವನ್ನು– ಹೀಗೆ 3 ಅಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಷಡ್‌ಗಣಾಧೀಶರಾದ ಶೂನ್ಯ ಪೀಠಾಧೀಶ ಅಲ್ಲಮಪ್ರಭದೇವರು, ಚಿನ್ಮಯಜ್ಞಾನಿ ಚನ್ನಬಸವಣ್ಣ, ಲಿಂಗಾಂಗಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ,

ವೀರ ಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರ ಮಂಟಪಗಳನ್ನು ಗೋಳಾಕಾರದಲ್ಲಿ ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಶರಣೋದ್ಯಾನವನ್ನು ನಿರ್ಮಿಸಲಾಗುವುದು. ಧರ್ಮಪಿತ ಬಸವಣ್ಣನವರ ತತ್ತ್ವಗಳ ಪ್ರಚಾರ ಮಾಡಲು ಬೃಹತ್ ಸ್ಮಾರಕಗಳು ಸಾಧಕವಾಗುತ್ತವೆಂಬ ಮನೀಷೆಯಿಂದ ಈ ಬೃಹತ್ ಪುತ್ಥಳಿಯನ್ನು ನಿರ್ಮಿಸಲಾಗುತ್ತಿದೆ. ಬಸವ ಗಂಗೋತ್ರಿಯಲ್ಲಿ ನಡೆಯುತ್ತಿರುವ ಅನಾಥಾಲಯ, ವೃದ್ಧಾಶ್ರಮಗಳಿಗೆ ಸ್ವತಂತ್ರವಾದ ಕಟ್ಟಡ ಆಗಬೇಕಾಗಿದೆ. ಆದ್ದರಿಂದ ಈ ಎಲ್ಲ ಕೆಲಸಗಳಿಗೆ ಉದಾರವಾದ ಧನಸಹಾಯದ ಅಗತ್ಯವಿದೆ. ಬಸವ ಗಂಗೋತ್ರಿಯ ಕೆಲಸಗಳು ವಿಶ್ವಕಲ್ಯಾಣ ಮಿಷನ್ ಸಂಸ್ಥೆಯಿಂದ ನಡೆಯುತ್ತಿದ್ದು ಇದಕ್ಕೆ 80ಜಿ ಇನ್‌ಕಂ ಟ್ಯಾಕ್ಸ್ ಸೌಲಭ್ಯವಿದೆ. ಆದ್ದರಿಂದ ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಲು ಅವಕಾಶವಿದೆ.

ಅವರ ಭಕ್ತ್ಯಾನುಸಾರ ಶಕ್ತ್ಯಾನುಸಾರ ಕಟ್ಟಡ ನಿಧಿಗೆ ಎಷ್ಟಾದರೂ ಕೊಡಬಹುದು.

1. 11,000 (ಹನ್ನೊಂದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ದಾನಿಗಳ ಫಲಕದಲ್ಲಿ ಬರೆಸಲಾಗುವುದು.

2. 25,000 (ಇಪ್ಪತ್ತೈದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿಸಲಾಗುವುದು.

3. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಪ್ರತ್ಯೇಕ ಶಿಲಾಫಲಕದಲ್ಲಿ ಕೆತ್ತಿಸಲಾಗುವುದು.

4. 1,00,000 (ಒಂದು ಲಕ್ಷ) ರೂ. ಮತ್ತು ಮೇಲೆ ಕೊಟ್ಟವರ ಹೆಸರನ್ನು ಪ್ರತ್ಯೇಕ ಶಿಲಾ ಫಲಕದಲ್ಲಿ ಕೆತ್ತಿಸಲಾಗುವುದಲ್ಲದೆ ಅವರ (ಅಥವಾ ಅವರು ತಿಳಿಸಿದವರ) ಭಾವಚಿತ್ರವನ್ನು ಮ್ಯೂಸಿಯಮ್‌ನಲ್ಲಿ ಪ್ರದರ್ಶಿಸಲಾಗುವುದು.

5. ಮೆಟ್ಟಿಲಿನ ಯೋಜನೆ : 30 ಅಡಿ ಎತ್ತರದ ಪೀಠವನ್ನೇರಲು ಮೆಟ್ಟಿಲುಗಳನ್ನು ಮಾಡುತ್ತಿದ್ದು 15000 ರೂ ಕೊಟ್ಟವರ ಹೆಸರನ್ನು ಮೆಟ್ಟಿಲಿನ ಮೇಲೆ ಕೆತ್ತಿಸಲಾಗುವುದು.

ಬೆಂಗಳೂರಿಗೆ ಬಂದವರು ತಪ್ಪದೆ ಸಂದರ್ಶಿಸುವಂತಹ ಬೃಹತ್ ಮೂರ್ತಿಯು ನಿರ್ಮಾಣವಾಗಲಿರುವುದರಿಂದ ಸಹೃದಯರು ತನುಮನಧನದಿಂದ ನೆರವಾಗಬೇಕೆಂದು ಕೋರುತ್ತೇವೆ.

ಬಸವ ಗಂಗೋತ್ರಿ ಸ್ಥಳ ನಿರ್ದೇಶನ :

ಬೆಂಗಳೂರು-ಮೈಸೂರು ರಸ್ತೆಯ ಮೇಲೆ ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮದ ಮಧ್ಯೆ ಬಸವ ಗಂಗೋತ್ರಿ ಪ್ರವೇಶ ದ್ವಾರವಿದೆ. ವಿನಂತಿಯ ಮೇರೆಗೆ ಬಿ.ಎಂ.ಟಿ.ಸಿ. ಬಸ್‌ಗಳು ನಿಲ್ಲುತ್ತವೆ. ಸಿಟಿ ಮಾರ್ಕೆಟ್ಟಿನಿಂದ ರೂಟ್ ನಂಬರ್ 228, 229, 231. ಮೆಜೆಸ್ಟಿಕ್‌ನಿಂದ ಪ್ಲಾಟ್ ಫಾರಂ ನಂ.19 ರಿಂದ ಬಿಡದಿಗೆ ಹೋಗುವ ಬಸ್ಸು.

ಸಂಪರ್ಕಿಸುವ ವಿಳಾಸ

ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ಬಸವ ಗಂಗೋತ್ರಿ
ಕುಂಬಳಗೋಡು - 560 074
ಕೆಂಗೇರಿ ಹೋಬಳಿ
ಬೆಂಗಳೂರು ಜಿಲ್ಲೆ. 9448386717

ಪೂಜ್ಯ ಶ್ರೀ ಜಗದ್ಗುರು ಡಾ.ಮಾತೆ ಮಹಾದೇವಿ
ಬಸವ ಮಂಟಪ
2035, 20ನೇ ಮುಖ್ಯರಸ್ತೆ
2ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು - 560 010
ದೂರವಾಣಿ : 080-23131476







ಬೆಂಗಳೂರಿನಲ್ಲಿ
ಶ್ರೀ ಚನ್ನಬಸವರಾಜ ಸ್ವಾಮೀಜಿ
ವಿಶ್ವಧರ್ಮ ಪ್ರವಚನದ
ಸುಮಧುರ
ಕ್ಷಣಗಳು

PRINTED BY SUMUKA PRINTERS BANGALORE 24/10/2016

Registered with Registrar oF News Papers in India, New Delhi No.19988/70 Postal Registration (SSP os BG-West Dn) No.KA/BGW-50/WPP-17/2015-17, Linced to Post the Printed Magazine without Prepayment (WPP-17). Posted at Bengaluru PSO. Mysuru Road (Bg-560026) on 3rd, 10th, 20th of month. Pages 32+4